ದಲಿತರ ಬಂಡಾಯದ ಕೂಗು

ಪಂಚಮ

ಸಂಪುಟ : 2 ಸಂಚಿಕೆ : 8-9 ● ಪಾಕ್ಷಿಕ ● 40 ಪೈಸೆ ● 5 ನವಂಬರ್ 1977

ಕಲ್ಲಿನಿಂದ ತಲೆಗೆ ಜಜ್ಜಿ ಗಾಯ ; ಕಂಪ್ಲೇಂಟ್ ಕೊಟ್ಟರೆ

ಪೆಟ್ರೋಲ್ ಹಾಕಿ ಸುಡುವ ಬೆದರಿಕೆ

(ನಮ್ಮ ಪ್ರತಿನಿಧಿಯಿಂದ)

ಶಿವಮೊಗ್ಗ ಜಿಲ್ಲೆ ಚನ್ನಗಿರಿ ತಾಲ್ಲೂಕಿನ ದೋಣಿ ಹಳ್ಳಿಯಲ್ಲಿ ಸವರ್ಣೀಯ ಮಂಜಪ್ಪ, ಮಲ್ಲೇಶಪ್ಪ ಎಂಬುವರು ಹರಿಜನ ಯುವತಿಯೊಬ್ಬಳನ್ನ ಕೆಣಕಿದ್ದಲ್ಲದೆ, ಅದನ್ನು ಪ್ರಶ್ನಿಸಿದ ಆಕೆಯ ಅಣ್ಣ ತಿಮ್ಮಯ್ಯನ ತಲೆಗೆ ತೀವ್ರವಾಗಿ ಪೆಟ್ಟಾಗುವಂತೆ ಕಲ್ಲಿನಿಂದ ಜಜ್ಜಿರುವ ಘಟನೆಯೊಂದು ತಿಳಿದು ಬಂದಿದೆ

ದಿನಾಂಕ 8-10-77 ರಂದು ಸಂಜೆ ಸುಮಾರು 4-5 ಗಂಟೆಯಲ್ಲಿ ಈ ಘಟನೆ ನಡೆದಿದ್ದು, ತಿಮ್ಮಯ್ಯನ ತಂಗಿ ಗೋಮಾಳದಲ್ಲಿ ದನಗಳನ್ನು ಮೇಯಿಸುತ್ತಿರುವಾಗ (ಇವರ ಕುಟುಂಬದವರು ಊರವರ ದನಗಳನ್ನು ಕಾಯ್ದುಕೊಂಡು ಜೀವನ ನಡೆಸುತ್ತಿ[illegible]) ಸವರ್ಣೀಯರಾದ ಮಂಜಪ್ಪ, ಮಲ್ಲೇಶಪ್ಪ ಎಂಬ ಯುವಕರು ವಯಸ್ಸಿಗೆ ಬಂದಿರುವ ಆಕೆಯನ್ನು ಕೆಣಕಿದರೆಂತಲೂ, ಆಕೆ ಮನೆಗೆ ಬಂದು ತನ್ನ ಅಣ್ಣ ತಿಮ್ಮಯ್ಯನಿಗೆ ಇದೆಲ್ಲಾ ಹೇಳಿದಾಗ ಆತ ಗೋಮಾಳಕ್ಕೆ ಹೋಗಿ ಸವರ್ಣೀಯ ಯುವಕರನ್ನು ಆ ಬಗ್ಗೆ ಕೇಳಿದಾಗ ಅವರು ತಿಮ್ಮಯ್ಯನನ್ನು ಕೆಳಗೆ ಕೆಡವಿ ಚೆನ್ನಾಗಿ ಹೊಡೆದದ್ದಲ್ಲದೆ ಆತನ ತಲೆಗೆ ಕಲ್ಲುಗಳಿಂದ ತೀವ್ರವಾಗಿ ಪೆಟ್ಟಾಗುವಂತೆ ಜಜ್ಜಿದರೆಂದೂ ಆತ ಹೊಡೆತ ತಾಳಲಾರದೆ ಪ್ರಜ್ಞೆ ತಪ್ಪಿದಾಗ ಆ ಯುವಕರು ಓಡಿಹೋದರೆಂದು ಗೊತ್ತಾಗಿದೆ.

ನಂತರ ಪ್ರಜ್ಞೆ ತಪ್ಪಿ ಬಿದ್ದಿದ್ದ ತಿಮ್ಮಯ್ಯನನ್ನು ಕೆಲವು ಹರಿಜನರು ಚನ್ನಗಿರಿ ಆಸ್ಪತ್ರೆಗೆ ಎತ್ತಿಕೊಂಡು ಹೋಗಿ ಚಿಕಿತ್ಸೆ ಕೊಡಿಸಿ, ಡಾಕ್ಟರಿಂದ ಸರ್ಟಿಫಿಕೇಟ್ ತೆಗೆದುಕೊಂಡು ಪೋಲೀಸ್ ಕಂಪ್ಲೇಂಟ್ ಕೊಡಲು ಹೋಗುತ್ತಿದ್ದಾಗ ದೋಣಿಹಳ್ಳಿಯವನೇ ಆದ ಪಟೇಲ್ ಚಂದ್ರಪ್ಪ (ಹೊಡೆದಿರುವವರ ಸಂಬಂಧಿ) ಬಂದು "ಪೋಲೀಸ್ ಕಂಪ್ಲೇಂಟ್ ಕೊಡಬೇಡಿ. ಊರಿನಲ್ಲೇ ನ್ಯಾಯ ಮಾಡಿ ತೀರ್ಮಾನ ಮಾಡುವ" ಎಂದು ಹೇಳಿ ಹಿಂದಕ್ಕೆ ಕರೆದುಕೊಂಡು ಹೋಗಿರುವನು. ಇದಾದ ಎರಡು ಮೂರು ದಿನಗಳಾದರೂ ನ್ಯಾಯ ಸೇರದೆ ಇರುವ ಬಗ್ಗೆ ಚಂದ್ರಪ್ಪನನ್ನು ಕೇಳಲಾಗಿ ಆತ ತನ್ನ ವರಸೆಯನ್ನು ಬದಲಿಸಿ "ನ್ಯಾಯ ಏನೂ ಸೇರದ್ ಬೇಕಿಲ್ಲಾ ನೀವೇನಾದ್ರೂ ಕಂಪ್ಲೇಂಟ್ ಕೊಟ್ರೆ ನಿಮ್ಮ ಮನೆಗೆ ಪೆಟ್ರೋಲ್ ಹಾಕಿ ಸುಡ್ತೀನಿ" ಎಂದು ಬೆದರಿಸುತ್ತಿರುವನೆಂದೂ ಇದರಿಂದ ಹತಾಶರಾದ ಹರಿಜನ ಕುಟುಂಬವು ಯಾವಾಗ ಏನು ಮಾಡುವರೋ ಎಂದು ನಡುಗುತ್ತಿರುವರು. ●

ಮನೆಗೆ ಬಂದ ಅಪರಾಧಕ್ಕೆ ಹಲ್ಲೆ!

ಬೆಂಗಳೂರು ಜಿಲ್ಲೆಯ ಸಮೇತನಹಳ್ಳಿಯಲ್ಲಿ ಹರಿಜನ ಯುವಕನೊಬ್ಬ ಸವರ್ಣೀಯರ ಮನೆಯ ಒಳಕ್ಕೆ ಹೋದ "ಅಪರಾಧ"ಕ್ಕಾಗಿ ಸವರ್ಣೀಯರು ಅವನ ಮೇಲೆ ಹಲ್ಲೆ ನಡೆಸಿರುವ ಘಟನೆಯೊಂದು ವರದಿಯಾಗಿದೆ. ಹಲ್ಲೆಗೊಳಗಾದ ರಾಮಯ್ಯ ಎನ್ನುವ ಯುವಕ "ಪ್ಯೂಪಲ್ಸ್ ಎಜುಕೇಷನ್ ಸೊಸೈಟಿ"ಯ ಮೂಲಕ ಸಮೇತನಹಳ್ಳಿಯ ದಲಿತರನ್ನೆಲ್ಲ ಒಗ್ಗೂಡಿಸುವ ಕೆಲಸದಲ್ಲಿ ತೊಡಗಿದ್ದನೆಂದೂ ಗೊತ್ತಾಗಿದೆ.

ಮನೋಹರ್ ಎನ್ನುವ ಒಬ್ಬ ಯುವಕ ಸಾಮಾಜಿಕ ಆರ್ಥಿಕ ಪರಿಸ್ಥಿತಿಯ ಅಧ್ಯಯನಕ್ಕಾಗಿ ಸಮೇತನಹಳ್ಳಿಗೆ ಬಂದು ರೂಮಿನಲ್ಲಿ ಬಾಡಿಗೆಗಾಗಿ ಇದ್ದನೆಂದು ತಿಳಿದು ಬಂದಿದೆ ಈ ಮಧ್ಯೆ ಸಮೇತನಹಳ್ಳಿಯ ಆರ್ಥಿಕ-ಸಾಮಾಜಿಕ ಪರಿಸ್ಥಿತಿಯ ಬಗ್ಗೆ ಮಾಹಿತಿ ಪಡೆಯಲು ಮನೋಹರ್, ಪ್ಯೂಪಲ್ಸ್ ಎಜುಕೇಷನ್ ಸೊಸೈಟಿಯ ಕಾರ್ಯದರ್ಶಿ ರಾಮಯ್ಯನನ್ನು ತನ್ನ ರೂಮಿಗೆ ಆಹ್ವಾನಿಸಿದನೆಂದೂ, ಅದರಂತೆ ರಾಮಯ್ಯ ಸೆಪ್ಟೆಂಬರ್ 20ರಂದು ಮನೋಹರನ ರೂಮಿಗೆ ಬಂದು ಅವನ ಜೊತೆ ಮಾತನಾಡುತ್ತಾ ಕುಳಿತಿದ್ದನೆಂದು ತಿಳಿದುಬಂದಿದೆ. ಇಷ್ಟರಲ್ಲಿ ಈ ವಿಷಯ ತಿಳಿದ ಸವರ್ಣೀಯ ಯುವಕ ನಾರಾಯಣಪ್ಪ ರೂಮಿಗೆ ನುಗ್ಗಿ "ಹೊಲಿ ಸೂಳೆ ಮಗ್ನೆ, ನೀ ಇಲ್ಲಿ ತಂಕ ಬಂದ್ಯಾ." ಎಂದು ಹೀನಾಯವಾಗಿ ಬಯ್ಯ ತೊಡಗಿದನೆಂದೂ ಅಷ್ಟರಲ್ಲಿ ರೂಮಿನ ಮಾಲೀಕ ನಂಜುಂಡಪ್ಪ ಮತ್ತಿತರರು ಸೇರಿಕೊಂಡು ದೊಣ್ಣೆ ಮತ್ತು ಆಯುಧಗಳಿಂದ ರಾಮಯ್ಯನ ಮೇಲೆ ಹಲ್ಲೆ ನಡೆಸಿದರೆಂದು ತಿಳಿದುಬಂದಿದೆ.

ಹಲ್ಲೆಗೊಳಗಾದ ರಾಮಯ್ಯ ಸಮೇತನಹಳ್ಳಿಯಿಂದ ಹೇಗೊ ತಪ್ಪಿಸಿಕೊಂಡು ಬಂದು ಬೆಂಗಳೂರಿನ ಐ.ಜಿ.ಪಿ ಯವರಿಗೆ ದೂರಿತ್ತಿದ್ದು ಈ ಮಧ್ಯೆ ರಾಮಯ್ಯನ ಮನೆಯವರಿಗೆ ಸಮೇತನ ಹಳ್ಳಿಯ ಸವರ್ಣೀಯರು ಪ್ರಾಣಭಯ ಉಂಟುಮಾಡಿದ್ದಾರೆಂದು ಗೊತ್ತಾಗಿದೆ.

ಆಶ್ಚರ್ಯವೆಂದರೆ ಸವರ್ಣೀಯರ ನಂಜುಂಡಪ್ಪನ ಮನೆಯ ರೂಮಿನಲ್ಲಿ ಬಾಡಿಗೆಗೆ ಇದ್ದ ಕೋಡಿದ್ದ ಧಾರವಾಡದ ಮನೋಹರ್ ಕೂಡ "ಹರಿಜನ" ಎಂದು ತಿಳಿದು ಬಂದಿದೆ! ●

ಹಾಸನದಲ್ಲಿ ದಲಿತ ಯುವ ಸಂಘಟನೆ

ಶೋಷಣೆ ದಮನಕ್ಕೊಳಗಾಗಿರುವ ದಲಿತ ಜನತೆ ಇತ್ತೀಚಿನ ದಿನಗಳಲ್ಲಿ ಎಚ್ಚೆತ್ತು ಕೊಳ್ಳುತ್ತಾ, ಅಲ್ಲಲ್ಲಿ ಸಂಘಟನೆಗೊಳ್ಳುತ್ತಿದ್ದು, ಇದೇ ತಿಂಗಳು 13 ರಂದು ಹಾಸನದಲ್ಲಿ ಜಿಲ್ಲಾ ದಲಿತ ಯುವ ಸಂಘಟನಾ ಸಮ್ಮೇಳನ ನಡೆಯುವುದು. ರಾಜ್ಯದ ಎಲ್ಲಾ ಕಡೆಗಳಿಂದ ವಿಚಾರವಂತ ದಲಿತ ಯುವಕರು ಬರಲಿದ್ದು, ಸಮ್ಮೇಳನ ಸುರುವಾಗುವ ಮೊದಲು ಹಾಸನದ ಬೀದಿಗಳಲ್ಲಿ ಅಸಮಾನತೆಯ ವಿರುದ್ಧದ ಸಾಂಕೇತಿಕ ಮೆರವಣಿಗೆ ನಡೆಯುವುದು. ನಂತರ ಒಂದು ದಿನದ ಸಮ್ಮೇಳನದ ಮೊದಲ ಅಧಿವೇಶನದಲ್ಲಿ ವಿಚಾರ ಸಂಕಿರಣ ಮತ್ತು ಎರಡನೆ ಅಧಿವೇಶನದಲ್ಲಿ ದಲಿತ ಸಂಘಟನೆಯ ಬಗ್ಗೆ ಚರ್ಚೆ ನಡೆಯುವುದು.

ಭದ್ರಾವತಿ ಪುರಸಭ ಕಛೇರಿ ಮುಂದೆ

ಅನ್ಯಾಯ ಪ್ರತಿಭಟಿಸಿ ಅನ್ನ ಸತ್ಯಾಗ್ರಹ

ಭದ್ರಾವತಿ ಪುರಸಭೆಯವರು ಮಾಡಿರುವ ಅನ್ಯಾಯ ಅವ್ಯವಹಾರಗಳನ್ನು ಪ್ರತಿಭಟಿಸಿ ತಾ|| 2-11-77 ರಂದು ಪುರಸಭೆ ಕಛೇರಿ ಮುಂದೆ ಅನ್ನ ಸತ್ಯಾಗ್ರಹ ಮಾಡುವ ಮೊದಲು ನಗರದ ಮುಖ್ಯ ಬೀದಿಗಳಲ್ಲಿ ಪುರಸಭೆಯ ಆಡಳಿತ ವರ್ಗದವರ ವಿರುದ್ಧ ಘೋಷಣೆಗಳನ್ನು ಕೂಗುತ್ತ ದಲಿತರು ನಡೆಸಿದ ಪ್ರತಿಭಟನಾ ಮೆರವಣಿಗೆ ಸಾರ್ವಜನಿಕರ ಗಮನ ಸೆಳೆಯಿತು. 'ದಲಿತ ಸಂಘರ್ಷ ಸಮಿತಿ'ಯು ಸಂಘಟಿಸಿದ್ದ ಈ ಪ್ರತಿಭಟನೆಯ ಹಿಂದೆ ಹದಿನೆಂಟು ವರ್ಷಗಳ ನೋವು ಅಡಗಿದೆ.

1958ರಲ್ಲಿ ಹಲವಾರು ಕಡೆಗಳಿಂದ ಬಂದ ಬಡ ಹರಿಜನರು ವಸತಿ ಸೌಕರ್ಯವಿಲ್ಲದೆ ಭದ್ರಾವತಿಯ ನ್ಯೂ ಮಾಡಲ್ ಕಾಲೋನಿಯಲ್ಲಿ ಸರ್ವೆ ನಂ. 93ರ ಜಮೀನಿನಲ್ಲಿ ವಾಸ ಮಾಡುತ್ತಿದ್ದು, ಸಂಬಂಧಪಟ್ಟ ಅಧಿಕಾರಿಗಳಿಗೆ ವಸತಿಗಾಗಿ ಸೈಟು ಮಂಜೂರು ಮಾಡಿಕೊಡಿರೆಂದು ಅರ್ಜಿ ಸಲ್ಲಿಸುತ್ತಾ ಬಂದರು (ಪೂರ್ತಿ ವರದಿ ಪಂಚಮದ 5-10-77ರ ಸಂಚಿಕೆಯಲ್ಲಿ.) ಇದರ ಕಡೆ ಯಾವ ಅಧಿಕಾರಿಯೂ ಗಮನ ಹರಿಸಲಿಲ್ಲ. ಹೀಗಿದ್ದಾಗ 1966ರಲ್ಲಿ ಆಗ ಮುನಿಸಿಪಾಲಿಟಿ ಅಧ್ಯಕ್ಷರಾಗಿದ್ದ ಕೃಷ್ಣಭಟ್ಟರು ಕೋರ್ಟಿನಿಂದ ಆಜ್ಞೆ ಹೊರಡಿಸಿ ಹರಿಜನರನ್ನು ಸ್ಥಳದಿಂದ ಓಡಿಸಲು ಪ್ರಯತ್ನಪಟ್ಟರು. 1973ರಲ್ಲಿ ಪೌರಾಡಳಿತ ಸಚಿವರಾಗಿದ್ದ ಬಸವಲಿಂಗಪ್ಪನವರು ಹರಿಜನರಿಗೆ ಸೈಟು ಹಂಚಬೇಕೆಂದು ಆಜ್ಞೆ ಹೊರಡಿಸಲು ಪುರಸಭೆಯವರು ಸೈಟು ಹಂಚಲು ತಲಾ 25ರೂಗಳಂತೆ ಸೈಟು ಚಾರ್ಜನ್ನೂ ವಸೂಲಿ ಮಾಡಿದರು. (ಚಾರ್ಜು ವಸೂಲಿ ಮಾಡುವಾಗ ಕೆಲವರಿಗೆ ರಶೀತಿ ಕೊಟ್ಟರಲ್ಲದೆ ಕೆಲವರಿಗೆ ರಶೀತಿಯನ್ನು ಕೊಡಲಿಲ್ಲ. ಮತ್ತು ಸೈಟು ಪಟ್ಟಿಯಲ್ಲಿ ಹರಿಜನ ಗೌಡನಾಗಿದ್ದಾನೆ, ಗೌಡ ಹರಿಜನನಾಗಿದ್ದಾನೆ.) ಮತ್ತೆ ಈ ಬಗ್ಗೆ ಯಾವ ಚಟುವಟಿಕೆಯೂ ನಡೆಯಲಿಲ್ಲ. ಬಡ ಹರಿಜನರು ಅಧಿಕಾರಿಗಳ ಬಳಿ ಸುಮಾರು ಸಲ ತಿರುಗಿದರೂ ಏನೂ ಆಗಲಿಲ್ಲ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ 'ನಾನು ನಿಮಗೆ ಸೈಟು ಮಂಜೂರು ಮಾಡಿಸುತ್ತೇನೆಂದು ಓಟುಗಿಟ್ಟಿಸಿ ಗೆದ್ದು ಬಂದ ಅನ್ವರ್‌ಖುದ್ದೂಸ್‌ರವರು ಕೊನೆಗೆ ಹೇಳಿದ್ದು: "ಈ ಜಾಗ ರೆಗ್ಯುಲೇಟೆಡ್ ಮಾರ್ಕೇಟ್‌ಗೆ ಬೇಕಾಗಿದೆ. ಆದ್ದರಿಂದ ಮೊದಲು ಈ ಜಾಗ ಖಾಲಿ ಮಾಡಿ ಆಮೇಲೆ ಮುಂದಿನ ಮಾತು" ಎಂದು. ಪುರಸಭೆಯವರೂ ಅದೇ ಮಾತಾಡಿದರು. ಇಂಥ ಪರಿಸ್ಥಿತಿಯಲ್ಲಿ ದಿಕ್ಕುತೋಚದಾಗಿದ್ದ ಬಡ ಹರಿಜನರನ್ನು "ದಲಿತ ಸಂಘರ್ಷ ಸಮಿತಿ" ಸಂಘಟಿಸಿ ಹೋರಾಟಕ್ಕೆ ಅಣಿಗೊಳಿಸಿತಲ್ಲದೆ ಮೊದಲು 24-10-77ರಂದು ಒಂದು ಕರಪತ್ರ ಹೊರಡಿಸಿ ಒಂದು ವಾರದೊಳಗಾಗಿ ಹರಿಜನರಿಗೆ ಆಗಿರುವ ಅನ್ಯಾಯ-ಅವ್ಯವಹಾರಗಳನ್ನು ಸರಿಪಡಿಸಿ, ಸೈಟು ಮಂಜೂರು ಮಾಡಿ ಹಕ್ಕು ಪತ್ರಗಳನ್ನು ಕೊಡದಿದ್ದರೆ ಪುರಸಭೆ ಕಛೇರಿ ಮುಂದೆ ಸರದಿ ಪ್ರಕಾರ ಅನ್ನ ಸತ್ಯಾಗ್ರಹ ಕೂರುತ್ತೇವೆ ಎಂದು ಕರೆಕೊಟ್ಟಿತು. ಇದೂ ಅಧಿಕಾರಿಗಳನ್ನು ತಟ್ಟಲಿಲ್ಲ.

ಹೋರಾಟವೊಂದೇ ಸಮಸ್ಯೆ ಬಗೆಹರಿಸಬಲ್ಲದೆಂದು ತಾವು ಮೊದಲೇ ತಿಳಿಸಿದಂತೆ ದಲಿತರೆಲ್ಲರೂ 2-11-77ರಂದು ಪುರಸಭೆಯ ಮುಂದೆ ಸತ್ಯಾಗ್ರಹ ಕೂರುವ ಮೊದಲು ಬೆಳಗಿನ ಹತ್ತು ಗಂಟೆ ಸಮಯಕ್ಕೆ ನಗರದ ಬೀದಿಗಳಲ್ಲಿ ಪ್ರತಿಭಟನಾ ಮೆರವಣಿಗೆ ತೆಗೆದರು. ಮುಖ್ಯ ಬೀದಿಗಳನ್ನು ಸುತ್ತಿಕೊಂಡು ಮೆರವಣಿಗೆ ಪುರಸಭೆ ಕಛೇರಿ ಮುಂದೆ ಬಂದು ಘೋಷಣೆ ಕೂಗತೊಡಗಿದಾಗ ಪುರಸಭೆಯ ಆಡಳಿತಾಧಿಕಾರಿ ಕೆಲವು ಮುಖ್ಯಸ್ಥರನ್ನು ಕರೆಸಿ "ನಿಮಗೆ ಆಗಿರುವ ಅನ್ಯಾಯವನ್ನು ಸರಿಪಡಿಸುತ್ತೇನೆಂದೂ — ಒಂದು ತಿಂಗಳು ಟೈಮ್ ಕೊಡಿ ಎಂದು

(6ನೇ ಪುಟಕ್ಕೆ)

ಕೆರೆಹಿತ್ತಲು ಗ್ರಾಮದಲ್ಲಿ

ಅಮಾನುಷ ದೌರ್ಜನ್ಯ : ಅಧಿಕಾರಿಗಳ ಮೌನ

ದಲಿತರ ಮೇಲೆ ನಡೆಯುವ ಬಹಳಷ್ಟು ದಬ್ಬಾಳಿಕೆ ದೌರ್ಜನ್ಯಗಳು ಮುಚ್ಚಿಹೋಗುತ್ತವೆ. ಅಲ್ಲೊಂದು ಇಲ್ಲೊಂದು ಘಟನೆಗಳು ಮಾತ್ರ ಹೊರಗೆ ಬರುತ್ತವೆ. ಇಂಥ ಘಟನೆಗಳನ್ನು ಹುಡುಕಿ 'ದಲಿತೋದ್ಧಾರದ ನಾಟಕ' ಆಡುವವರ ಮುಖಕ್ಕೆ ಹಿಡಿಯುವ ಕೆಲಸವನ್ನು ಇತ್ತೀಚೆಗೆ ಕೆಲವೇ ಕೆಲವು ದಲಿತ ಸಂಘಗಳು ಮಾಡುತ್ತಿವೆ. ಈ ದಿಕ್ಕಲ್ಲಿ ನಿರ್ದಿಷ್ಟ ಕಾರ್ಯಕ್ರಮಗಳನ್ನು ಹಾಕಿಕೊಂಡಿರುವ ಬೆಂಗಳೂರಿನ "ದಲಿತ ಕ್ರಿಯಾ ಸಮಿತಿ" ಇತ್ತೀಚೆಗೆ ಶಿವಮೊಗ್ಗ ಜಿಲ್ಲೆಯ ಕೆರೆಹಿತ್ತಲು ಗ್ರಾಮದಲ್ಲಿ ಹರಿಜನರ ಮೇಲೆ ನಡೆದ ಅಮಾನುಷ ದೌರ್ಜನ್ಯದ ಘಟನೆಯೊಂದನ್ನು ವರದಿ ಮಾಡಿದೆ.

ಘಟನೆಯ ಹಿನ್ನೆಲೆ ಹೀಗಿದೆ :

ಕೆರೆಹಿತ್ತಲು ಗ್ರಾಮದ ಹರಿಜನರಾದ ಗುಮ್ಮಿನಾಗಪ್ಪ ಮತ್ತು ಇವನ ತಮ್ಮ ಗುಮ್ಮಿಬರ್ಮಪ್ಪ—ಇವರ ಜಮೀನು ಇದೇ ಊರಿನ ಲಿಂಗಾಯಿತರಾದ ಕೆಂಜಿಗಪ್ಪಗೌಡರ ಜಮೀನಿನ ಪಕ್ಕದಲ್ಲಿ ಇದೆ. ಮನೆ ಕೂಡ ಸುಮಾರು ಹತ್ತಿರತ್ತಿರದಲ್ಲೇ. ಗುಮ್ಮಿನಾಗಪ್ಪ ಮತ್ತು ಬರ್ಮಪ್ಪರ ಮನೆಯ ಎದುರಿಗೆ ಕೆಂಜಿಗಪ್ಪಗೌಡನ ಮನೆಯ ಪಕ್ಕದಲ್ಲೇ ಕೆರೆ ಮತ್ತು ಜಮೀನ ಕಡೆ ಹೋಗುವ ಒಂದು ಓಣಿ ಇದೆ. ಗುಮ್ಮಿಬರ್ಮಪ್ಪನು ಸುಮಾರು ವರ್ಷಗಳಿಂದ ಕೆಂಜಿಗಪ್ಪಗೌಡನ ಎರಡು ಎಕರೆ ಜಮೀನನ್ನು ಗುತ್ತಿಗೆಗೆ ಮಾಡುತ್ತಿದ್ದು ಭೂಸುಧಾರಣೆಯ ಪ್ರಕಾರ ಜಮೀನು ಬರ್ಮಪ್ಪನಿಗೆ ಮಂಜೂರಾಯಿತು. ಇದನ್ನು ಸಹಿಸದ ಕೆಂಜಿಗಪ್ಪಗೌಡನು ಸಾಗರದ ಮುನ್ಸಿಫ್ ಕೋರ್ಟಿನಿಂದ ಇಂಜಕ್ಷನ್ ಆರ್ಡರು ತಂದು ಗುಮ್ಮಿಬರ್ಮಪ್ಪನು ಜಮೀನು ಮಾಡದಂತೆ ತಡೆದದ್ದಲ್ಲದೆ ತನ್ನ ಮನೆಯ ಪಕ್ಕದಲ್ಲೇ ಜಮೀನಿಗೆ ಹಾದುಹೋಗುತ್ತಿದ್ದ ಓಣಿಗೆ ಮುಳ್ಳುಬೇಲಿ ಹಾಕಿಸಿದನು. ದಾರಿಕಾಣದಂತೆ ಒಣಹುಲ್ಲು ಗೊಣಬೆಗಳನ್ನು ಹಾಕಿಸಿದನು. ಈ ಬಗ್ಗೆ ಗುಮ್ಮಿನಾಗಪ್ಪ ಮತ್ತು ಬರ್ಮಪ್ಪ ಸಾಗರ ತಾಲ್ಲೂಕಿನ ಅಸಿಸ್ಟೆಂಟ್ ಕಮೀಷನರ್, ತಹಸಿಲ್ದಾರ್, ಬಿ.ಡಿ.ಓ. ಗಳಿಗೆ ಅರ್ಜಿಕೊಟ್ಟು ತಿಳಿಸಲಾಗಿ ಅವರು ಸ್ಥಳಕ್ಕೆ ಬಂದು ಓಣಿಯನ್ನು ಬಿಡಲು ಕೆಂಜಿಗಪ್ಪಗೌಡನಿಗೆ ಹೇಳಿದರಲ್ಲದೆ ಅವನ ಮನೆಯ ಪಕ್ಕದಲ್ಲಿ ಇರುವ ಸರಕಾರಿ ಖಾಲಿ ಜಾಗವನ್ನು ಮನೆ ಇಲ್ಲದವರಿಗೆ ಬಿಟ್ಟುಕೊಡಲು ಗ್ರಾಮದ ಛೇರ್ಮನ್ನರಿಗೆ ತಿಳಿಸಿದರು. ಇಷ್ಟರಲ್ಲಿ ಜುಲೈ 7 ರಂದು ಕೆಂಜಿಗಪ್ಪಗೌಡ ಗುಮ್ಮಿಬರ್ಮಪ್ಪನ ಜಮೀನಿನ ಮೇಲೆ ತಂದಿದ್ದ ಇಂಜಕ್ಷನ್ ಆರ್ಡರ್ ವಜಾ ಆಯಿತು. ಬರ್ಮಪ್ಪನಿಗೆ ಜಮೀನನ್ನು ಬಿಡಬೇಕಾಯಿತು. ಮುಳ್ಳುಬೇಲಿ ತೆಗೆಯಬೇಕಾಯಿತು – ಇವೆಲ್ಲದರಿಂದ ಕೆಂಜಿಗಪ್ಪಗೌಡನು ಸಿಟ್ಟು ತೀರಿಸಿಕೊಳ್ಳಲು ಕಾಯುತ್ತಿದ್ದನೆಂದು ತಿಳಿದುಬಂದಿದೆ.

ಹಠಾತ್ತನೆ ಹಲ್ಲೆ

ತಾ|| 16—7—77 ರಂದು ಸಂಜೆ 6 ಗಂಟೆ ಸಮಯಕ್ಕೆ ಜಮೀನಿನಿಂದ ಗುಮ್ಮಿನಾಗಪ್ಪನ ಹೆಂಡತಿ ಕೊಲ್ಲಮ್ಮ, ನಾಗರಾಜು (19) ಕೆಂಜಿಗಪ್ಪಗೌಡನ ಮನೆಯ ಪಕ್ಕದ ಓಣಿಯಲ್ಲಿ ಬರುತ್ತಿದ್ದರು. ಈ ಸಮಯಕ್ಕೆ ಮನೆಯಲ್ಲಿ ಗುಮ್ಮಿನಾಗಪ್ಪನಾಗಲಿ ಬರ್ಮಪ್ಪನಾಗಲೀ ಇರಲಿಲ್ಲವಾದ್ದರಿಂದ, ಇದನ್ನೇ ಕಾಯುತ್ತಿದ್ದ ಕೆಂಜಿಗಪ್ಪಗೌಡನ ಮಗ ಬೂದ್ಯಪ್ಪಗೌಡನು ಸುಮಾರು ಜನರ ಜೊತೆ ಹುಲ್ಲುಗೊಣಬೆಯ ಮರೆಯಲ್ಲಿ ಅವಿತಿದ್ದು ಮೋಸದಿಂದ ಹಿಂದಿನಿಂದ ಬಂದು ನಾಗರಾಜನ ತಲೆಗೆ ಗುದ್ದಲಿಯಿಂದ ಹೊಡೆದನೆಂದೂ, ಹೊಡೆತಕ್ಕೆ ನಾಗರಾಜ ತತ್ತರಿಸಿ ನೆಲಕ್ಕೆ ಬೀಳುವಷ್ಟರಲ್ಲಿ ಕೊಲ್ಲಮ್ಮನಿಗೂ ಸಿಕ್ಕಸಿಕ್ಕಂತೆ ಎಲ್ಲರೂ ಥಳಿಸುತ್ತಿದ್ದರೆಂದು ತಿಳಿದುಬಂದಿದೆ. ಇಷ್ಟರಲ್ಲಿ ಈ ದೃಶ್ಯವನ್ನು ಕಂಡ ಗುಮ್ಮಿನಾಗಪ್ಪನ ಹಿರಿಯ ಮಗಳು ಶ್ರೀಮತಿ ಜಯಮ್ಮ ಮನೆಯಿಂದ ಓಡಿಬಂದು ಮೂರ್ಛೆಬಿದ್ದಿದ್ದ ತನ್ನ ತಮ್ಮ ನಾಗರಾಜನನ್ನು ಮೇಲಕ್ಕೆತ್ತುತ್ತಿದ್ದಾಗ ಕೆಂಜಿಗಪ್ಪಗೌಡನ ಮಗ ಬೂದ್ಯಪ್ಪಗೌಡನು ಕೈಲಿ ಹಿಡಿದಿದ್ದ ಗುದ್ದಲಿಯಿಂದ ಅವಳ ತಲೆಗೆ ಹೊಡದಿದ್ದರಿಂದ ರಕ್ತ ಸ್ರಾವದಿಂದ ನೆಲಕ್ಕೆ ಉರುಳಿದಳೆಂದೂ, ಹೊಡೆಯುತ್ತಿದ್ದುದನ್ನು ತಡೆಯಲು ಬಂದ ಚನ್ನಪ್ಪ (18) ಮತ್ತಿತರ ಹರಿಜನರನ್ನೂ ಬೂದ್ಯಪ್ಪಗೌಡನ ಗುಂಪು ಅಮಾನುಷವಾಗಿ ಥಳಿಸಿತೆಂದು ತಿಳಿದುಬಂದಿದೆ. ತಲೆಗೆ ಬಲವಾದ ಪೆಟ್ಟುಬಿದ್ದಿದ್ದ ಜಯಮ್ಮನನ್ನು ಆನಂದಾಪುರದ ಆಸ್ಪತ್ರೆಗೆ ಸೇರಿಸಲಾಗಿ ಅವಳ ತಲೆಗೆ 3½ ಅಂಗುಲ ಉದ್ದ ಮತ್ತು ಅರ್ಧ ಅಂಗುಲ ಆಳದಷ್ಟು ಗಾಯವಾಗಿದೆಯೆಂದು ತಿಳಿಯಿತಂತೆ. ಅಲ್ಲಿನ ಡಾ|| ಕೃಷ್ಣಮೂರ್ತಿಯವರು ಕೆಂಜಿಗಪ್ಪಗೌಡನಿಗೆ ಬೇಕಾದವರಾದ್ದರಿಂದ ಜಯಮ್ಮನನ್ನು ಸರಿಯಾಗಿ ನೋಡಿಕೊಳ್ಳಲಿಲ್ಲವೆಂದೂ, ಇದರಿಂದ ತಲೆಯ ಗಾಯ ಕೀತುಕೊಂಡು ಜಯಮ್ಮನ ಸ್ಥಿತಿ ಚಿಂತಾಜನಕವಾದ್ದರಿಂದ ಅವಳನ್ನು ಸಾಗರದ ಆಸ್ಪತ್ರೆಗೆ ತೆಗೆದುಕೊಂಡು ಹೋಗಬೇಕಾಯಿತೆಂದು ತಿಳಿದುಬಂದಿದೆ.

ಮತ್ತೆ ಮುಳ್ಳು ಬೇಲಿ

ಜುಲೈ 16 ರಂದು ನಡೆದ ಈ ದೌರ್ಜನ್ಯದ ಬಗ್ಗೆ ಪೋಲೀಸರಿಗೆ ದೂರು ಹೋಗಿದ್ದರೂ ಹರಿಜನರಿಗೆ ಯಾವ ರಕ್ಷಣೆಯೂ ದೊರಕಲಿಲ್ಲವೆಂದೂ ಮತ್ತು ದೌರ್ಜನ್ಯ ನಡೆಸಿದವರ ವಿರುದ್ಧ ಯಾವುದೇ ಕ್ರಮವನ್ನು ತೆಗೆದುಕೊಳ್ಳಲಿಲ್ಲವೆಂದು ಹೇಳಲಾಗಿದೆ. ಇದರಿಂದಾಗಿ ಕೆಂಜಿಗಪ್ಪಗೌಡ ಮತ್ತು ಅವನ ಕಡೆಯವರು ದೊಣ್ಣೆ ಮಚ್ಚುಗಳ ಸಮೇತವಾಗಿ ತಾ|| 21—7—77 ರಂದು ನಾಗಪ್ಪ ಬರ್ಮಪ್ಪರು ಜಮೀನ ಕಡೆ ಹೋಗುತ್ತಿದ್ದ ದಾರಿಯನ್ನು ಮುಳ್ಳುಬೇಲಿಯಿಂದ ಮುಚ್ಚಿದರಲ್ಲದೆ ಹರಿಜನರ ಮನೆಗಳ ಮೇಲೆ ದಾಳಿಮಾಡುವ ಪ್ರಯತ್ನ ನಡೆಸಿದರೆಂದೂ, ಗೊತ್ತಾಗಿದೆ. ಈ ಬಗ್ಗೆ ಹರಿಜನರು ಭಯದಿಂದ ತಾ|| 22-7-77 ರಂದು ಡೆಪ್ಯುಟಿ ಸೂಪರಿಡೆಂಟರಿಗೆ ದೂರು ಕೊಟ್ಟರೂ ಅವರು ಯಾವ ಕ್ರಮವನ್ನು ತೆಗೆದುಕೊಳ್ಳಲಿಲ್ಲವೆಂದೂ, ಇದರಿಂದ ಹತಾಶರಾದ ಹರಿಜನರು ಮತ್ತೆ ತಾ|| 30-7-77 ರಂದು ಸೂಪರಿಟೆಂಡೆಂಟ್ ಆಫ್ ಪೋಲೀಸರಿಗೆ ದೂರುಕೊಟ್ಟರೆಂದೂ ಆದರೆ ಅವರೂ ಯಾವ ಕ್ರಮವನ್ನು ತೆಗೆದುಕೊಳ್ಳಲಿಲ್ಲವೆಂದು ತಿಳಿದುಬಂದಿದೆ.

ಹರಿಜನರ ಮೇಲೆ ಇಷ್ಟೆಲ್ಲಾ ದೌರ್ಜನ್ಯ ನಡೆದಿದ್ದರೂ ಸ್ಥಳೀಯ ಅಧಿಕಾರಿಗಳು ಯಾವುದೇ ಕ್ರಮ ತೆಗೆದುಕೊಳ್ಳದಿರುವುದರಿಂದ ಕೆರೆಹಿತ್ತಲು ಗ್ರಾಮದ ಸುತ್ತಮುತ್ತಲ ಹರಿಜನರು ಭೀತಿಗೊಳಗಾಗಿದ್ದಾರೆಂದೂ ಈ ಬಗ್ಗೆ ಸೂಕ್ತ ತನಿಖೆ ನಡೆಸಬೇಕೆಂದೂ ಸರ್ಕಾರವನ್ನು ಬೆಂಗಳೂರಿನ ಕ್ರಿಯಾ ಸಮಿತಿಯು ಆಗ್ರಹಪಡಿಸಿದೆ. ●

ಅಸ್ಪೃಶ್ಯ ವಿದ್ಯಾರ್ಥಿ ಹಾಸ್ಟೆಲ್ ಅಧ್ಯಕ್ಷ ಆಗುವುದಕ್ಕೂ ಅಸಹನೆ

(ನಮ್ಮ ಪ್ರತಿನಿಧಿಯಿಂದ)

ಚುನಾವಣೆ, ಪ್ರಜಾಪ್ರಭುತ್ವ ನಗೆಪಾಟಲಾಗುವಂಥ, ಸಂಗತಿಯೊಂದು ಮೈಸೂರಿನ ಮಾನಸಗಂಗೋತ್ರಿ ಪಿ. ಜಿ. ಹಾಸ್ಟೆಲ್ಲಿನಲ್ಲಿ ನಡೆದಿದೆ. ಹಳ್ಳಿಯ ಅವಿದ್ಯಾವಂತರು ಪ್ರಜಾಪ್ರಭುತ್ವಕ್ಕೆ ಅರ್ಥ 'ತಂದು ಕೊಡುತ್ತಿದ್ದರೆ ಉನ್ನತ ಶಿಕ್ಷಣ ಪಡೆಯುತ್ತಿರುವವರೇ ಪ್ರಜಾಪ್ರಭುತ್ವದ ಪತನಕ್ಕೆ ಕಾರಣರಾಗುವಂಥ ವಿಷಾದದ ಸಂಗತಿ ಬೆಳಕಿಗೆ ಬಂದಿದೆ.

ತಾ|| 11-9-77 ರಂದು ಗಂಗೋತ್ರಿಯ ಪಿ.ಜಿ. ಹಾಸ್ಟೆಲ್ಲಿನ ವಿದ್ಯಾರ್ಥಿ ಸಂಘಕ್ಕೆ ಚುನಾವಣೆ ನಡೆಯಿತು. ವಿದ್ಯಾರ್ಥಿ ಸಂಘದ ಅಧ್ಯಕ್ಷ ಸ್ಥಾನಕ್ಕೆ ಶ್ರೀ ಬಿ. ಎಸ್. ಚಂದ್ರಶೇಖರ್ ಮತ್ತು ಶ್ರೀ ಕೆ. ಜಿ. ರಾಜಶೇಖರ್ ರವರ ನಡುವೆ ನೇರ ಸ್ಪರ್ಧೆ ಏರ್ಪಟ್ಟಿತ್ತು. ಮತಗಳ ಎಣಿಕೆಯಾದಾಗ ಒಟ್ಟು 288 ಓಟುಗಳು ಚಲಾಯಿಸಲ್ಪಟ್ಟಿದ್ದವು. ಅವುಗಳಲ್ಲಿ 2 ಓಟುಗಳು ಕಲುಷಿತವಾಗಿದ್ದುವು, 3 ಜನ ಅಧ್ಯಕ್ಷ ಸ್ಥಾನಕ್ಕೆ ಯಾರಿಗೂ ಓಟು ಮಾಡದ್ದರಿಂದ ಅವು ನಿರರ್ಥಕವಾದವು. ಆದರೆ ಕಡೆಗಣಿಸಬೇಕಾದಂಥ ಮೇಲ್ಕಂಡ ಐದು ಓಟುಗಳನ್ನ ಶ್ರೀ ಕೆ. ಜಿ. ರಾಜಶೇಖರ್‌ರ ಲೆಕ್ಕಕ್ಕೆ ಸೇರಿಸಲಾಗಿದೆ ಎಂಬ ಅನುಮಾನ ವಿದ್ಯಾರ್ಥಿಗಳಲ್ಲಿದೆ. ಆರೀತಿ ಆಗಿದ್ದರೂ ಕೂಡ ಶ್ರೀ ಬಿ.ಎಸ್. ಚಂದ್ರಶೇಖರ್‌ಗೆ 145 ಓಟುಗಳೂ, ಶ್ರೀ ಕೆ. ಜೆ. ರಾಜಶೇಖರ್‌ಗೆ 143 ಓಟುಗಳೂ, ಬಂದವು. ಕಡೆಗಣಿಸಲ್ಪಡಬೇಕಾದ 5 ಓಟುಗಳನ್ನು ಶ್ರೀ ರಾಜಶೇಖರ್‌ರ ಲೆಕ್ಕಕ್ಕೆ ಸೇರಿಸಲಾಗಿರುವ ಶಂಕೆ ಇದ್ದರೂ ಕೂಡ ಹಾಗೂ ಬಿ ಎಸ್. ಚಂದ್ರಶೇಖರ್‌ರವರೇ ಗೆದ್ದ ಅಭ್ಯರ್ಥಿ ಆಗುತ್ತಾರೆ. ಆದರೆ ಇದು ಅಲ್ಲಿಗೇ ನಿಲ್ಲಲಿಲ್ಲ. ಹಾಸ್ಟೆಲ್ಲಿನ ವಾರ್ಡನ್‌ರವರಾದ ಶ್ರೀ ಶೇಷಾದ್ರಿಯವರು "ಆರು ಜನ ಊರಿಗೆ ಹೋಗುವ ವಿದ್ಯಾರ್ಥಿಗಳು ನಿನ್ನೆಯೇ (10 9-77) ತಮ್ಮ ಓಟುಗಳನ್ನು ನನ್ನ ಬಳಿ ಕೊಟ್ಟಿದ್ದು ಅದು ಶ್ರೀ ರಾಜಶೇಖರ್‌ಗೆ ಬಂದಿದೆ" ಎಂದು ತಿಳಿಸಿ, ಅಕ್ರಮವಾದ ಆ ಆರು ಓಟುಗಳನ್ನು ಶ್ರೀ ರಾಜಶೇಖರ್‌ರವರ ಲೆಕ್ಕಕ್ಕೆ ಸೇರಿಸಿ ಮತಗಳ ಎಣಿಕೆ ಮಾಡುತ್ತಿದ್ದ ಶ್ರೀ ಶೇಷಾದ್ರಿಯವರು ಪರಾಭವಗೊಂಡ ಶ್ರೀ ರಾಜಶೇಖರ್‌ರವರೇ ವಿಜಯೀ ಅಭ್ಯರ್ಥಿ ಎಂದು ಘೋಷಿಸಿದ್ದಾರೆ!

ಅನೇಕ ಸಲ ಚಂದ್ರಶೇಖರ್‌ಗೆ ಬಂದಿದ್ದ ಮತವನ್ನು ರಾಜಶೇಖರ್‌ಗೆ ಬಂದ ಮತ ಎಂದು ಎಣಿಸುತ್ತಿದ್ದರೆಂದೂ ಗಮನಿಸುತ್ತಿದ್ದ ವಿದ್ಯಾರ್ಥಿಗಳು ಆ ತಪ್ಪನ್ನೆಲ್ಲ ಗುರುತಿಸಿ ಸರಿಮಾಡುತ್ತಿದ್ದರೆಂದೂ ಅಲ್ಲಿನ ವಿದ್ಯಾರ್ಥಿಗಳು ತಿಳಿಸಿದರು. ವಾರ್ಡನ್‌ರವರು ಪ್ರಜಾಪ್ರಭುತ್ವಕ್ಕೆ ಹಗಲು ಹಾದರವನ್ನು ಯಾಕೆ ಮಾಡಿದರು ಎಂದುದನ್ನು ಅರ್ಥ ಮಾಡಿಕೊಳ್ಳಲು ಕಷ್ಟವೆನಿಸುತ್ತದೆ. ನಿಜವಾಗಿ ಗೆದ್ದಿರುವ ಅಭ್ಯರ್ಥಿ ಶ್ರೀ ಚಂದ್ರಶೇಖರ ಹರಿಜನನಾದ್ದರಿಂದ ಹರಿಜನ ಅಭ್ಯರ್ಥಿ ಹಾಸ್ಟೆಲ್ಲಿನ ಅಧ್ಯಕ್ಷನಾಗುವುದು ವಾರ್ಡನ್‌ರವರಿಗೆ ಸಹನೆಯಾಗಲಿಲ್ಲವೆ ಎಂಬ ಅನುಮಾನ ಗಟ್ಟಿಯಾಗುತ್ತದೆ. ಅದಕ್ಕಾಗಿ ಅವರು ಎಣಿಸುವಾಗಲೇ ಜಾಣಪೆದ್ದನಂತೆ ತಪ್ಪು ತಪ್ಪು ಎಣಿಸಿದರು. ಕಲುಷಿತವಾದ ಐದು ಓಟನ್ನು ಸೇರಿಸಿದರೂ ಶ್ರೀ ಚಂದ್ರಶೇಖರ್ ಸೋಲಲಿಲ್ಲ. ಆಗ ನಿನ್ನೆ 6 ಜನ ಬರೆದುಕೊಟ್ಟಿರುವರು ಎಂದು ತಿಳಿಸಿ ಆ ಅಕ್ರಮ ಓಟನ್ನು ಗಣಿಸಿ ಸೋತವರನ್ನೇ ಗೆದ್ದವರೆಂದು ಘೋಷಿಸಿ ಶೇಷಾದ್ರಿಯವರು, ಚುನಾವಣೆ ನಾಚಿಕೆಪಟ್ಟು ಮುಖ ಮುಚ್ಚಿಕೊಳ್ಳುವಂತೆ ಮಾಡಿದ್ದಾರೆ. ಹಾಸ್ಟೆಲ್‌ನಲ್ಲಿ ಜಾತಿ ವಿಷ ಬೀಜವನ್ನು ನೆಟ್ಟಿದ್ದಾರೆ. ವಾರ್ಡನ್ ಶ್ರೀ ಶೇಷಾದ್ರಿಯವರು ಸಾವಿರ ಗಟ್ಟಲೆ ಹಣ ತೆಗೆದುಕೊಂಡು ಈ ರೀತಿ ಮಾಡಿರುವರೆಂದು ಗುಸು ಗುಸು ಇದೆ. ನಮ್ಮ ಪ್ರತಿನಿಧಿಗಳು ಈ ಬಗ್ಗೆ ಗೆದ್ದು ಸೋತ ಶ್ರೀ ಚಂದ್ರಶೇಖರ್‌ರವರನ್ನು ಕಂಡು "ವಾರ್ಡನ್ ಹಣ ತೆಗೆದುಕೊಂಡು ನಿಮಗೆ ಅನ್ಯಾಯ ಮಾಡಿದ್ದಾರೆ ಎಂಬ ಗುಲ್ಲು ನಿಜವೇ"? ಎಂದು ಪ್ರಶ್ನಿಸಿದಾಗ ಶ್ರೀ ಚಂದ್ರಶೇಖರ್ "ನಮ್ಮ ವಾರ್ಡನ್ ಆ ರೀತಿಯವರಲ್ಲ ಎಂದು ಗುಲ್ಲನ್ನು ನಿರಾಕರಿಸಿರುವರು.

(4ನೇ ಪುಟಕ್ಕೆ)

ತಿಮ್ಮಕ್ಕನ ಕಣ್ಣೀರ ಕತೆ:

ಸಾಲದ ಜಾಲ ಒಡ್ಡಿ ದಲಿತರನ್ನು ದೋಚುವ ಆರ್ಮುಗಂ

(ಬೆಂಗಳೂರು ಪ್ರತಿನಿಧಿಯಿಂದ)

ಅರವತ್ತರ ಹಣ್ಣು ಹಣ್ಣು ಮುದುಕಿ ತಿಮ್ಮಕ್ಕನ ಮುಖದ ತುಂಬಾ ದುಃಖದ ಸುಕ್ಕುಗಳು. ಗಂಡ ಸತ್ತು ಇಲ್ಲಿಗೆ ಏಳು ವರ್ಷ. ಹೆಸರಿಗೆ ಐದು ಮಕ್ಕಳು ಹೇಗೊ ಬೇದು ದೊಡ್ಡವರಾಗಿ ಒಬ್ಬೊಬ್ಬರು ಒಂದೊಂದು ದಿಕ್ಕಾದರು. ನನ್ನವರು ಎನ್ನುವವರು ಯಾರೂ ಇಲ್ಲ. ಅಲ್ಲಿ ಇಲ್ಲಿ ಸಿಕ್ಕುವ ಪೋಲಿ ದನಗಳ ಸೆಗಣಿ ಸೇರಿಸಿ ಬೆರಣಿ ತಟ್ಟಿದರೆ ಹೊಟ್ಟೆಗೆ, ಇಲ್ಲ: ಪೂರೆ ಖಾಲಿ. ಬೆಂಗಳೂರು ಜಯನಗರದ ವಿಜಯಾ ಕಾಲೇಜಿನ ಹಿಂದೆ ಕೊಚ್ಚೆ ನೀರಿನ ಜೋಗು ನೆಲದ ಮೇಲಿನ ಪುಟ್ಟ ಗುಡಿಸಲಲ್ಲಿ ತಲೆಗೆ ಕೈ ಕೊಟ್ಟು ಕೂರುವ ತಿಮ್ಮಕ್ಕನಿಗೆ ಈಗ ದಿಕ್ಕಿಲ್ಲ ಕತ್ತಲೆ ಕಾಣುತ್ತದೆ. ಹಿಂದೆ ಟ್ರಸ್ಟ್ ಬೋರ್ಡಿನವರು ಕಾಲೋನಿಯಲ್ಲಿ ಕಟ್ಟಿಸಿಕೊಟ್ಟದ್ದ ಮನೆಯೊಂದನ್ನು ಬಾಡಿಗೆಗೆ ಕೊಟ್ಟು ಬರುವ 60 ರೂಪಾಯಿಗಳಿಂದ ಹೇಗೋ ಜೀವನ ಸಾಗುತ್ತಿತ್ತು. ಆದರೆ ಬಿಲ್ಡಿಂಗ್ ಕಾಂಟ್ರಾಕ್ಟರ್ ಸಾವ್ಕಾರಿ ಆರ್ಮುಗಂನ ಕೈ ಸಾಲದ ಜಾಲಕ್ಕೆ ಬಿದ್ದ ಮೇಲೆ ಅದಕ್ಕೆ ಕಲ್ಲು ಬಿತ್ತು. ತಿಮ್ಮಕ್ಕನ ಜೀವನದಲ್ಲಿ ಅದೊಂದು ಮರೆಯಲಾಗದ ಘಟನೆ.

ಗಂಡ ಹಾಸಿಗೆ ಹಿಡಿದಿದ್ದ. ಖರ್ಚು ಹಣಕ್ಕಾಗಿ ಕಂಡಕಂಡವರ ಮುಖ ನೋಡುತ್ತಿದ್ದಾಗ ಸಾವ್ಕಾರಿ ಆರ್ಮುಗಂ ನಕ್ಕು ಒಂದಷ್ಟು ಹಣ ಕೊಟ್ಟ–ಲೆಕ್ಕಿಲ್ಲ–ಬುಕ್ಕಿಲ್ಲ. ಕೇಳಿದಾಗ ಕೊಡುತ್ತಾ ಬಂದ ಆರ್ಮುಗಂ ದೇವರಂತೆ ಕಂಡ. ಅವ ಕೊಟ್ಟ ಹಣವೆಲ್ಲ ಒಟ್ಟಿಗೆ 300 ರೂಪಾಯಿ ಇರಬೇಕು. ಅದನ್ನು ತೀರಿಸುವ ಮಾತು ಬಂದಾಗ ತಿಮ್ಮಕ್ಕನ ಮನೆಯಿಂದ ಬರುವ ಬಾಡಿಗೆ ಹಣವನ್ನು ಪ್ರತಿಸಾರಿಯೂ (ಸಾಲ ತೀರುವ ತನಕ) ಆರ್ಮುಗಂ ತಾನೇ ವಸೂಲಿ ಮಾಡಿಕೊಳ್ಳುವಂತೆ ಕರಾರಾಯಿತು. ಇಪ್ಪತ್ತು ವರ್ಷಗಳಿಂದ ಕಟ್ಟಿದ ಮನೆ ಕಂದಾಯದ ರಶೀತಿ ಪತ್ರಗಳನ್ನೆಲ್ಲ ಆರ್ಮುಗಂ ನೋಡುತ್ತೇನೆಂದು ಈಸಿಕೊಂಡ. ಈಗ ಸಾಲ ತೀರುತ್ತದೆ. ಇನ್ನೇನೊ ತೀರುತ್ತದೆ ಮನೆಯ ಬಾಡಿಗೆ ಹಣ ಮತ್ತೆ ನನಗೆ ಬರುತ್ತದೆ ಎಂದು ತಿಮ್ಮಕ್ಕ ಆಸೆಕಣ್ಣಲ್ಲಿ ಕಾಯುತ್ತಾ ಬಂದಳು ಆದರೆ ಸಾಲ ತೀರಲೇ ಇಲ್ಲ. ಒಮ್ಮೆ ಕೆಲವು ತಿಂಗಳ ಹಿಂದೆ ಇದ್ದಕ್ಕಿದ್ದಂತೆ ತಿಮ್ಮಕ್ಕನಿಗೆ ಆರ್ಮುಗಂ ಹೆಂಡತಿ ಹೆಸರಿನಲ್ಲಿ ಒಂದು ಲಾಯರ್ ನೋಟೀಸು ಬಂತು—"ಮನೆಯ ಆಧಾರದ ಮೇಲೆ ನೀನು ನನ್ನಿಂದ ಹತ್ತು ಸಾವಿರ ರೂ. ಸಾಲ ತೆಗೆದುಕೊಂಡಿರುವುದರಿಂದ ನಿನ್ನ ಮನೆ ನನಗೆ ಸೇರಿದೆ". ಎನ್ನುವಂತೆ ನೋಟೀಸಿನಲ್ಲಿ ಬರೆದಿತ್ತು. ನಂತರ ತಿಮ್ಮಕ್ಕನ ಮನೆಯಲ್ಲಿ ಬಾಡಿಗೆಗೆ ಇದ್ದವರನ್ನು ಓಡಿಸಿ ಆರ್ಮುಗಂ ಆ ಮನೆಯನ್ನು ತನ್ನದಾಗಿಸಿಕೊಂಡ. ಲಬೋ ಲಬೋ ಎಂದುಕೊಂಡು ಬಂದ ತಿಮ್ಮಕ್ಕನಿಗೆ "ಇನ್ನೊಮ್ಮೆ ಬಂದರೆ ಇಲ್ಲದಂತೆ ಮಾಡಿ ಬಿಡುತ್ತೇನೆ ಉಷಾರ್" ಎಂದು ಗದರಿಸಿದ. ತಲೆ ತಲೆ ಚಚ್ಚಿಕೊಂಡ ತಿಮ್ಮಕ್ಕ ಕಂಡ ಕಂಡವರಿಗೆಲ್ಲ, ಹೇಳಿಕೊಂಡು ಅತ್ತಳು. ಪೋಲೀಸಿಗೆ ದೂರು ಕೊಟ್ಟಳು. ಯಾರಾರೋ ಹೇಳುವ ಆಫೀಸುಗಳಿಗೆಲ್ಲಾ ದಿನಾಲು ನಡೆದುಕೊಂಡು ಹೋಗಿ ಬಾಗಿಲು ಕಾದಳು. ಅವಕಾಶ ಸಿಕ್ಕಾಗ ಒಳಗೆ ಹೋದಳು ಆದರೆ ಹೊರಗೆ ಬರುವಾಗ ಕಣ್ಣಲ್ಲಿ ನೀರು ತುಂಬಿಕೊಂಡಿರುತ್ತಿತ್ತು.

ಬಿಲ್ಡಿಂಗ್ ಕಾಂಟ್ರಾಕ್ಟರ್ ಆರ್ಮುಗಂಗೆ ಇದೊಂದು ಸಾಮಾನ್ಯ ವಿಷಯ. ನೀರು ಕುಡಿದಂತೆ. ಸಲೀಸು ಇಲ್ಲದಿದ್ದರೆ ಇವನು ಖಂಡಿತಾ ಸಾವ್ಕಾರನಾಗುತ್ತಿರಲಿಲ್ಲ ಎನ್ನುವುದು ದಾಸರ ಕಾಲೋನಿಯಲ್ಲಿ ಚಾಲ್ತಿಯಲ್ಲಿರುವ ಮಾತಾಗಿದೆ. ಆರ್ಮುಗಂ ಬೆಂಗಳೂರು ತಿಲಕ್‌ನಗರದಲ್ಲಿ ಒಂದು ದೊಡ್ಡ ಬಿಲ್ಡಿಂಗನ ಮಾಲೀಕನಾಗಿದ್ದು, ಬಡವ ಎಂದುಕೊಂಡು ಟ್ರಸ್ಟ್ ಬೋರ್ಡಿನಿಂದ ಸುಮಾರು ಸೈಟ್‌ಗಳನ್ನು ಪಡೆದಿದ್ದಾನಲ್ಲದೆ ಏನೂ ಗೊತ್ತಿಲ್ಲದ ಅನಾಥರಿಂದ ಕೈ ಸಾಲ ಕೊಟ್ಟಂತೆ ಮಾಡಿ (ತಿಮ್ಮಕ್ಕನಿಗೆ ಮಾಡಿರುವಂತೆ) ಬಹಳಷ್ಟು ಸೈಟು ಮತ್ತು ಮನೆಗಳನ್ನು ಹೊಡೆದಿದ್ದಾನೆಂದು ಬಹಳಷ್ಟು ಜನಕ್ಕೆ ಗೊತ್ತಾಗಿದೆ. ಹಣ್ಣು ಮುದುಕಿ ತಿಮ್ಮಕ್ಕನನ್ನು ಪೂರ್ತಿ ಅನಾಥೆಯನ್ನಾಗಿ ಮಾಡಿರುವ ಈ ಬಿಲ್ಡಿಂಗ್ ಕಾಂಟ್ರಾಕ್ಟರ್ ಆರ್ಮುಗಂ ಈಗ ಬೆಂಗಳೂರು ಜಯನಗರದ ದಾಸರ ಕಾಲೋನಿಯ ಕೂಲಿಕಾರ ಕಾರ್ಮಿಕ ದಲಿತರಿಗೆಲ್ಲ ಪ್ರಶ್ನೆಯಾಗಿ ಕುಳಿತಿದ್ದಾನೆ.

ಸುಮಾರು 40 ವರ್ಷಕ್ಕೆ ಹಿಂದೆ ದಾಸರ ಕಾಲೋನಿಯ ದಲಿತರಿಗೆ ಟ್ರಸ್ಟ್ ಬೋರ್ಡಿನವರು ಮನೆಗಳನ್ನು ಕಟ್ಟಿಸಿಕೊಟ್ಟಾಗ, ಸ್ವಲ್ಪ ಸ್ಥಳವನ್ನು ಮಕ್ಕಳ ಆಟವಾಡಲು ಮತ್ತು ಇನ್ನಿತರ ಸಾರ್ವಜನಿಕ ಉಪಯೋಗಕ್ಕಾಗಿ ಬಿಡಲಾಗಿತ್ತು. ಆದರೆ ಕಾಲ ಕಳೆದಂತೆ ಕೆಲವು ಜನ ಈ ಜಾಗವನ್ನು ಅಕ್ರಮಿಸಿಕೊಂಡರು. ಈ ಬಗ್ಗೆ ದಾಸರ ಕಾಲೋನಿಯ ದಲಿತರೆಲ್ಲ ಕಾರ್ಪೋರೇಷನ್ ಆಡಳಿತಾಧಿಕಾರಿಗಳಾದ ಲಕ್ಷ್ಮಣರಾವ್ ಅವರಿಗೆ ದೂರು ಕೊಡಲಾಗಿ 1975ರ ಡಿಸೆಂಬರ್‌ನಲ್ಲಿ ಅವರು ಸ್ಥಳಕ್ಕೆ ಭೇಟಿಕೊಟ್ಟು ಆ ಸ್ಥಳವನ್ನು ಅಕ್ರಮವಾಗಿ ಆಕ್ರಮಿಸಿಕೊಂಡಿದ್ದವರನ್ನು ತೆರವು ಮಾಡುವಂತೆ ಹೇಳಿದರು. ಮತ್ತು ಅಕ್ರಮವಾಗಿ ಸ್ಥಳವನ್ನು ಆಕ್ರಮಿಸಿಕೊಂಡಿದ್ದವರಿಗೆ ಬೇಗ ಸ್ಥಳವನ್ನು ತೆರವು ಮಾಡುವಂತೆ ಬೆಂಗಳೂರಿನ ಸಾರಕ್ಕಿ ಲೇಔಟಿನಲ್ಲಿ ಅವರಿಗೆ ಸೈಟುಗಳನ್ನು ಹಂಚಿದರು. ಇದರಿಂದ ಸ್ಥಳವನ್ನು ಆಕ್ರಮಿಸಿಕೊಂಡಿದ್ದವರೆಲ್ಲ ಆ ಸ್ಥಳವನ್ನು ಖಾಲಿ ಮಾಡಿ ಹೊಸ ಜಾಗಕ್ಕೆ ಹೋದರು. ಆದರೆ ಒಬ್ಬ ಮಾತ್ರ ಆ ಜಾಗವನ್ನು ಖಾಲಿ ಮಾಡಲೇ ಇಲ್ಲ. ಆತ ಕಾಂಟ್ರಾಕ್ಟರ್ ಆರ್ಮುಗಂ. ಈಗಾಗಲೇ ತಿಮ್ಮಕ್ಕನ ಮನೆಯನ್ನು ತನ್ನದಾಗಿಸಿಕೊಂಡಿರುವ ಆರ್ಮುಗಂ ಇದೊಂದು ಮನೆಯನ್ನೂ ಲೆಕ್ಕ ಹಾಕಿಕೊಳ್ಳುತ್ತಿದ್ದಾನೆ.

ದಾಸರ ಕಾಲೋನಿಯ ದಲಿತರು ಆರ್ಮುಗಂ ಅಕ್ರಮಗಳ ಬಗ್ಗೆ ಕಾರ್ಪೋರೇಷನ್ ಅಧಿಕಾರಿ

(6ನೇ ಪುಟಕ್ಕೆ)

ಹಾಸನ ಜಿಲ್ಲೆಯ ಮರ್ಕುಲಿಯಲ್ಲಿ

ಸವರ್ಣೀಯರಿಂದ ಹರಿಜನ ಹುಡುಗಿಯ ಮಾನಭಂಗ

(ವರದಿ: ವಿಜಯ ಪಾಟೀಲ್)

ಹಾಸನ ಜಿಲ್ಲೆಯ ಮರ್ಕುಲಿ ಗ್ರಾಮದ ಹದಿನಾರು ವರ್ಷದ ಹರಿಜನ ಹುಡುಗಿ ತಾಯಮ್ಮ ಎಂಬವಳನ್ನು ಅದೇ ಊರಿನ ಇಬ್ಬರು ಗೌಡರು ಮಾನಭಂಗ ಮಾಡಿದ ಘೋರ ಘಟನೆಯೊಂದು ಇತ್ತೀಚೆಗೆ ನಡೆದಿದೆ.

ಜುಲೈ 22ನೇ ತಾರೀಖಿನಂದು ತಾಯಮ್ಮ ವಾರದ ಕೂಲಿ ದುಡ್ಡು ತೆಗೆದುಕೊಂಡು ಬರಲು ಹೊಸಳ್ಳಿ ಸಂತೆಗೆ ಹೋಗಿದ್ದಳು, ಮೇಸ್ತ್ರಿ ಗೋವಿಂದಯ್ಯ ದುಡ್ಡು ಕೊಡವುದು ತಡವಾದ ಕಾರಣ ಸಂಜೆಯಾದ ನಂತರ ಬನವಾಸೆ ಹುಳುವಾರೆ ಮಾರ್ಗವಾಗಿ ಊರಿಗೆ ಹೊರಟಳು.

ಈ ಒಬ್ಬಂಟಿ ಹೆಣ್ಣು ಕಾಲುದಾರಿಯಲ್ಲಿ ಅವಸರದಿಂದ ನಡೆಯುತ್ತಿದ್ದಾಗ, ಬನವಾಸೆ ಬಾರೆಹತ್ತಿರ ಬಂದಾಗ ದಾರಿಯಲ್ಲಿ ಸಿಕ್ಕ ಮರ್ಕಲಿ ಗ್ರಾಮದ ಗಿಡ್ಡೇಗೌಡನ ಮಗ ರಾಜೇಗೌಡ ಮತ್ತು ಬುಡ್ಡೇಗೌಡನ ಮಗ ರಾಜೇಗೌಡ ಇವಳನ್ನು ನೋಡಿ 'ಎಲ್ಲಿಗೆ ಹೋಗಿದ್ದೆ ? ಏನ ಕತೆ?' ಅಂತ ವಿಚಾರಿಸಿದಾಗ, ಸಂತೆಗೆ ಹೋಗಿದ್ದಾಗಿಯೂ, ವಾಪಸ್ಸು ಬರುವುದು ತಡವಾಯಿತೆಂದು, ಹೇಳಿದಳು. ಅವರಿಬ್ಬರೂ ಅಂಗರಕ್ಷಕರ ತರಹ, 'ನಾವಿಬ್ಬರೂ ಇದ್ದೇವೆ, ಏನುಭಯ ನಡಿ' ಅಂತ ಆಶ್ವಾಸನೆ ಕೊಟ್ಟರು.

ಧೈರ್ಯದಿಂದ ಅವಳು ಮುಂದೆ ಮುಂದೆ, ಇವರಿಬ್ಬರು ಅವಳ ಹಿಂದೆ ಹಿಂದೆ. ಸಂಜೆ ಸುಮಾರು ಆರು ಗಂಟೆ ಹುಳುವಾರೆಯ ಕೆರೆಕೋಡಿ ಹತ್ತಿರ ಹುಣಸೇ ಮರದ ಬಳಿ ಹೋಗುತ್ತಿರುವಾಗ ಅವರಿಬ್ಬರೂ 'ನಿಂತುಕೋ' ಅಂತ ಅಜ್ಞಾಪಿಸಿದರು. 'ಏನಣ್ಣಾ' ಅಂತ ಇವಳು ತಿರುಗಿ ಕೇಳಿದಾಗ ಅವರಿಬ್ಬರೂ ಹತ್ತಿರ ಬಂದು ಗಟ್ಟಿಯಾಗಿ ಹಿಡಿದುಕೊಂಡರು. ರಕ್ಷಣೆ ಆಶ್ವಾಸನೆಕೊಟ್ಟವರೇ ರಾಕ್ಷಸರಾಗಿ ಪರಿವರ್ತಿತರಾದದ್ದನ್ನು ಗಮನಿಸಿದ ತಾಯಮ್ಮ ಬೊಬ್ಬೆ ಹಾಕಿದಳು ಕೇಳುವವರಿಲ್ಲ, ಹೇಳುವವರಿಲ್ಲ.

'ನಿನ್ನ ಬೊಬ್ಬೆಗೆ ಓಗೊಡುವವರು ಯಾರೂ ಇಲ್ಲಿಲ್ಲ, ಸುಮ್ಮನೆ ನಾವು ಹೇಳದಂತೆ ಕೇಳು.' ಎಂದು ಆ ಇಬ್ಬರೂ ಮಾನಭಂಗದ ಹೇಸಿಕೃತ್ಯದಲ್ಲಿ ಕಾರ್ಯಪ್ರವೃತ್ತರಾದರು. ಗಿಡ್ಡೇಗೌಡನ ಮಗ ರಾಜೇಗೌಡ ರವಿಕೆ ಹಿಡಿದು ಎಳೆದು ಹರಿದು ಎದೆಗೆ ಕೈ ಹಾಕಿದ, ಬುಡ್ಡೇಗೌಡನ ಮಗ ರಾಜೇಗೌಡ ಅವಳ ಸೊಂಟವನ್ನು ಹವಿನಂತೆ ತಬ್ಬಿಕೊಂಡು ಲಂಗ ಹರಿದ ಪಶುಗಳಿಗಿಂತ ಹೀನಾಗಿ ವರ್ತಿಸಿದ ಆ ಇಬ್ಬರು ತಾರ್ಯಗಂಡರು ತಾಯಮ್ಮನನ್ನು ಕೆಳಗೆ ತಳ್ಳಿದರು. ಒಬ್ಬ ಅವಳ ಬಾಯನ್ನು ಬಿಗಿಯಾಗಿ ಅದುಮಿಕೊಂಡು ಹಿಡಕೊಂಡಾಗ ಇನ್ನೊಬ್ಬ ಹಠಸಂಭೋಗ ನಡೆಸಿದ. ಇವನ ನಂತರ ಅವನು ತನ್ನ ಪಾಲಿನ ಕೊಲೆಗಡುಕ ಕೃತ್ಯ ನಡೆಸಿದಾಗ ಮಾನವೀಯತೆ ಮಣ್ಣು ಮುಕ್ಕಿತ್ತು. 'ಕೆಟ್ಟೆನಲ್ಲಪ್ಪೋ' ಅಂತ ದುಃಖ—ನೋವಿನಿಂದ ಕೂಗಿದ ತಾಯಮ್ಮನ ಸ್ವರ ಅವಳ ಕರಾಳ ಭವಿಷ್ಯಕ್ಕೆ ಪಲ್ಲವಿಯಾಯಿತು.

ಆ ಇಬ್ಬರೂ ತಮ್ಮ ಸಾಹಸವನ್ನು ಅಲ್ಲಿಗೇ ನಿಲ್ಲಿಸಲಿಲ್ಲ. ಈ ಹೀನ ಕೃತ್ಯದ ನಿರಂತರ ನೆನವು ಉಳಿಯಲೆಂದು ತಾಯಮ್ಮನ ಕೆನ್ನೆ ಕಚ್ಚಿದರು. ತೊಡೆಯನ್ನು ಪರಚಿ ಗಾಯ ಮಾಡಿದರು.

'ನನ್ನ ತಂಗಿಯ ಮಾನ ಕೆಡಿಸಿದ ನಂತರ ಅವಳನ್ನು ಬೆತ್ತಲೆ ರೂಪದಲ್ಲಿಯೇ ಓಡಿಸಿಕೊಂಡು ಬಂದು ನಮ್ಮ ಊರ ಪುಟ್ಟಪ್ಪನವರ ಕಟ್ಟೆಯ ಹತ್ತಿರ ಅವಳು ಜಾರಿಬಿದ್ದಾಗ ಇಬ್ಬರೂ ಅವಳ ಕೈಕಾಲು ಹಿಡಿದು ಸಾಯಿಸಲು ನೀರಿಗೆ ಮುಳುಗಿಸುತ್ತಿದಾಗ ನನ್ನ ತಂಗಿ ಬಾಯಿ ಬಡಿದುಕೊಂಡಾಗ ಬಿಟ್ಟರು. ಆ ದಿನ ರಾತ್ರಿ ತಾಯಮ್ಮ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದಳು, ಎಂದು ತಾಯಮ್ಮನ ಅಣ್ಣ ಎಂ.ಕೆ. ಹದೂರಯ್ಯನವರು ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದಾರೆ

ಅಲ್ಲದೇ ಆ ಇಬ್ಬರೂ ರಾಜೇಗೌಡರು ಗ್ರಾಮದಲ್ಲಿ ಪುಂಡರಾಗಿದ್ದು ಅನೇಕ ಬಾರಿ ನಮ್ಮನ್ನು ಕಂಡರೆ ಛೇಡಿಸುವದು, ಬೈಯುವದು ಮಾಡುತ್ತಿರುತ್ತಾರೆ. ನಾವು ಬಡ ಹರಿಜನರಾಗಿದ್ದು ಯಾರ ರಕ್ಷಣೆ ಇಲ್ಲದೇ ಗ್ರಾಮದಲ್ಲಿ ತಿರುಗಾಡುವುದೇ ಅಸಾಧ್ಯವಾಗಿದೆ' ಎಂದು ಹದೂರಯ್ಯ ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ.

ತಾಯಮ್ಮ ತನ್ನ ದೂರನ್ನು ಜುಲೈ 24ನೇ ತಾರೀಖಿಗೆ ದುದ್ದ ಪೋಲೀಸ್ ಸ್ಟೇಶನ್ನಿಗೆ ಕೊಟ್ಟಿದ್ದು, ಪೋಲೀಸಿನವರು ತಮ್ಮ ತನಿಖೆಯನ್ನು ಇನ್ನೂ ನಡೆಸುತ್ತಿದ್ದಾರೆ. ●

ಅಸ್ಪೃಶ್ಯತೆಯನ್ನು ನಿರ್ಮೂಲನ ಮಾಡಲು
ಶ್ರೀ ಮುರಾರ್ಜಿಯವರ ಹತ್ತಿರ ಯಾವ ಮಂತ್ರದಂಡವಿದೆ?

ಅಸ್ಪೃಶ್ಯನ ಸ್ಪರ್ಶ ಹಾಗೂ ಅವನ ಬೆವರು, ಶ್ರೀಮಂತರಿಗೆ ಆಹಾರವನ್ನು ಬೆಳೆದುಕೊಡುತ್ತದೆ. ಉಳುಮೆ, ಬಿತ್ತನೆ, ಕೊಯ್ಲು ಹಾಗೂ ಒಕ್ಕಲು ದಿನಗಳಲ್ಲಿ ಅವನು ತೊಡಗಿಸುವ ಶ್ರಮ ಆಹಾರ ಧಾನ್ಯ ಒದಗಿಸುತ್ತದೆ. ಅವನು ಸಲಗಿಸುವ ನದಿ, ಕಾಲುವೆ, ಮತ್ತು ಭಾವಿಗಳು ನೀರನ್ನು ಒದಗಿಸುತ್ತವೆ. ಅಸ್ಪೃಶ್ಯರ ಸ್ಪರ್ಶವಿಲ್ಲದೆ ಉಳಿದವರಿಗೆ ತಿನ್ನಲು ಏನೂ ಸಿಕ್ಕಲಾರದು. ಒಂದು ಬಾರಿ ಶ್ರಮ ಜೀವಿ ಉತ್ಪಾದಿಸುವ ಆಹಾರ ಧಾನ್ಯ ಇತ್ಯಾದಿಗಳು ಮನೆಯೊಳಗೆ ಸುರಕ್ಷಿತವಾದುವೆಂದರೆ ತೀರಿತು, ಆಗ ಅವನು ಅಸ್ಪೃಶ್ಯನಾಗಿಬಿಡುತ್ತಾನೆ. ತರುವಾಯ, ಹಣವಂತ, ಜಮೀನುದಾರರ ಮನೆ ಬಾಗಿಲನ್ನು ಅವನ ನೆಳಲು ಕತ್ತಲೆಗೊಳಿಸುವಂತಿಲ್ಲ. ಅಥವಾ ಬೆಳೆದುಕೊಟ್ಟ ಆಹಾರವನ್ನು ಅವನ ಕೈಗಳು ಅಪವಿತ್ರಗೊಳಿಸುವಂತಿಲ್ಲ.

ಅಸ್ಪೃಶ್ಯತೆಯು ಬಹುದೊಡ್ಡ ಮೋಸಗಳಲ್ಲಿ ಒಂದು. ಇದು ಬುದ್ಧಿಯನ್ನು ನಿಯಂತ್ರಿಸುವ ರಾಕ್ಷಸತ್ವ. ಶ್ರಮಜೀವಿಗಳನ್ನು ತುಳಿಯಲು ಆಳುವ ವರ್ಗ ಇದನ್ನು ಪೋಶಿಸುತ್ತ ಬಂದಿದೆ. ಇದರಿಂದ ದುಡಿಮೆಗಾರ ತನ್ನ ಉತ್ಪಾದನೆಯಿಂದ ವಂಚಿತನಾಗುವುದು ಮಾತ್ರವಲ್ಲ, ಎಲ್ಲಾ ಬಗೆಯ ಮಾನವ ಗೌರವಗಳಿಂದ ನಿರಾಕರಿಸಲ್ಪಟ್ಟು, ಸುಲಿಗೆಗೆ ಗುರಿಯಾಗಿ, ಕೋತಿ, ಹಸು, ನಾಗರಹಾವು ಮುಂತಾದ ಪ್ರಾಣಿಗಳಿಗಿಂತ ಕೀಳಾಗಿ ಪರಿಗಣಿತನಾಗಿದ್ದಾನೆ.

ಪ್ರಧಾನಮಂತ್ರಿ ಶ್ರೀ ಮುರಾರ್ಜಿದೇಸಾಯಿಯವರು ಹೆಮ್ಮೆಯಿಂದ ಕೊಚ್ಚಿಕೊಳ್ಳುವಂತೆ, ಐದು ವರ್ಷಗಳಲ್ಲಿ ಅಸ್ಪೃಶ್ಯತೆಯನ್ನು ರದ್ದುಗೊಳಿಸಲು ಜನತಾ ಸರ್ಕಾರದ ಹತ್ತಿರ ಯಾವ ಮಂತ್ರ ದಂಡವಿದೆ? ಜನತಾ ಸರ್ಕಾರವು ಅಧಿಕಾರ ವಹಿಸಿಕೊಂಡಲಾಗಾಯ್ತು ವ್ಯಾಪಕವಾಗಿ ಹರಿಜನರ ಮೇಲೆ ನಡೆಯುತ್ತಿರುವ ಹತ್ಯೆಗಳು, ಇಂತಹ ಹೆಮ್ಮೆಯ ಮಾತುಗಳೆಲ್ಲ ರಾಜಕೀಯ ಭಾಷಣದಲ್ಲಿ ಮಾತ್ರ ಸಾಧ್ಯವೇ ಹೊರತು, ವಾಸ್ತವವಾಗಿ ಅಲ್ಲ ಎಂದು ತಿಳಿಸುತ್ತವೆ.

ಅಸ್ಪೃಶ್ಯತೆಯು ಶೋಷಣೆಯಲ್ಲಿ ಬೇರು ಬಿಟ್ಟಿದೆ. ಕೂಲಿಗಾರ ತನ್ನ ಶ್ರಮವನ್ನು ಗಂಟೆಯೊಂದಕ್ಕೆ ಮತ್ತೊಬ್ಬನಿಗೆ ಮಾರಿಕೊಳ್ಳುವನು. ಹಾಗೆಯೇ ಒಬ್ಬ ಗುಲಾಮ ಒಂದೇ ಬಾರಿಗೆ ತನ್ನ ಶ್ರಮವನ್ನು ಹಾಗೂ ತನ್ನನ್ನು ಇನ್ನೊಬ್ಬರಿಗೆ ಮಾರಿಕೊಳ್ಳುವನು. ಈ ದೃಷ್ಟಿಯಿಂದ ಅಸ್ಪೃಶ್ಯ ಗುಲಾಮನನ್ನು ಹೋಲುತ್ತಾನೆ. ಜಮೀನುದಾರ ಕೊಟ್ಟದ್ದನ್ನು ಬಿಟ್ಟು ಜೀವನೋಪಾಯಕ್ಕೆ ಯಾವ ಮಾರ್ಗವೂ ಇಲ್ಲದ ಅವನು ಗುಲಾಮರೀಯ ನಡಾವಳಿಗೆ ತಲೆಬಾಗುತ್ತಾನೆ. ಎಲ್ಲಿಯವರೆಗೆ ಬಡವರು ಭೂರಹಿತರಾಗಿದ್ದು, ಅಥವಾ ಕೇವಲ ಚೂರುಪಾರು ಭೂಮಿ ಹೊಂದಿದ್ದು, ಜೀವನಕ್ಕೆ ಅನ್ಯ ಮಾರ್ಗವಿಲ್ಲದೆ ಭೂಮಾಲೀಕರ ಕೃಪೆಗೆ ಪಾತ್ರರಾಗಿ ಬದುಕುತ್ತಾರೋ, ಅಲ್ಲಿಯವರೆಗೂ ಅಸ್ಪೃಶ್ಯತೆ ಜೀವಂತವಾಗಿರುತ್ತದೆ. ಪರಿಣಾಮಕಾರಿ ಪ್ರಜಾತಾಂತ್ರಿಕ ಭೂಸುಧಾರಣೆಯೊಂದಿಗೆ, ಸಂಪೂರ್ಣ ಸಾಮಾಜಿಕ ಬದಲಾವಣೆಯತ್ತ ಸಾಗುವ ಧೈರ್ಯ ಜನತಾ ಸರ್ಕಾರಕ್ಕೆ ಇದೆಯೇನು?

ಇಂದಿರಾ ಆಡಳಿತದ ಪ್ರಾರಂಭದಲ್ಲಿ ತೀವ್ರಗತಿಯ ಭೂ ಸುಧಾರಣೆಗಳು ಪ್ರಕಟಗೊಂಡಾಗ ಬಡವರಿಗಾಗಿ ಹಂಚಲು 80 ಮಿಲಿಯನ್ ಎಕರೆ ಹೆಚ್ಚುವರಿ ಭೂಮಿ ಇದ್ದುದು ಕಂಡುಬಂದಿತು. ಆದರೆ ಕಾಂಗ್ರೆಸ್ ಭೂಸುಧಾರಣೆಯ ಮೋಸವೆಂದರೆ, ಕೇವಲ 5 ಮಿಲಿಯನ್ ಎಕರೆ ಭೂಮಿ ಹೆಚ್ಚುವರಿ ಕಂಡಿದ್ದು, ಇದರಲ್ಲಿ ಎರಡು ಮಿಲಿಯನ್ ಎಕರೆ ಭೂಮಿಯನ್ನು ಮಾತ್ರ ಹಂಚಲಾಯಿತು. 80 ಮಿಲಿಯನ್ ಎಕರೆ ಭೂಮಿಯು ತಲಾ ನಾಲ್ಕು ಎಕರೆಗಳಂತೆ ಇಪ್ಪತ್ತು ಮಿಲಿಯನ್ ಅಸ್ಪೃಶ್ಯರ ಭೂದಾಹವನ್ನು ಅಡಗಿಸಲು ಸಾಕಾಗಿತ್ತು. ಇದರಿಂದ ಅಸ್ಪೃಶ್ಯರು ಭೂಮಾಲೀಕರ ಸುಲಿಗೆಯಿಂದ ರಕ್ಷಣೆ ಪಡೆಯಬಹುದಿತ್ತು. ಆದರೆ ಭೂಸುಧಾರಣೆಯು ಭೂಮಾಲೀಕರಿಂದ ಸೋಲನ್ನು ಅನುಭವಿಸಿತು. ಏಕೆಂದರೆ ಅವರು ಜಮೀನ್ದಾರಿ ಪದ್ಧತಿಯನ್ನು ಮುಂದುವರಿಸಿಕೊಂಡು ಹೋಗುವ ಮನಸ್ಸುಳ್ಳವರಾಗಿದ್ದರು. ಇಂಥ ಜಮೀನ್ದಾರಿ ಪದ್ಧತಿಯ ಅತ್ಯಂತ ಕ್ರೂರ—ಸ್ವರೂಪಗಳಲ್ಲಿ ಅಸ್ಪೃಶ್ಯತೆಯೂ ಒಂದಾಗಿದೆ. ಒಂದು ಪಕ್ಷ ಹಾಲಿ ಸಾಗುವಳಿಯಾಗುತ್ತಿರುವ 130 ಮಿಲಿಯನ್ ಹೆಕ್ಟಾರ್ ಭೂಮಿಯನ್ನು ಭೂಸುಧಾರಣೆಯಿಂದ ಸಂಪೂರ್ಣ ಹೊರತುಪಡಿಸಿದ್ದರೂ, ಅಸ್ಪೃಶ್ಯರ ಭೂದಾಹವನ್ನು ಅಡಗಿಸಲು ಬೇಕಾದಷ್ಟು ಭೂಮಿ ಇತ್ತು. ಅವರ ಹೊಟ್ಟೆಪಾಡಿಗೆ ಮಾರ್ಗವನ್ನು ಕಂಡುಹಿಡಿಯಬಹುದಿತ್ತು.

ಈ ರೀತಿ ಹಂಚಿಕೆ, ಅಥವಾ ಭೂರಹಿತರ ಹಿತಕ್ಕಾಗಿ ಇರುವ ಭೂಮಿ ಹತ್ತಿರ ಹತ್ತಿರ 150 ಮಿಲಿಯನ್ ಹೆಕ್ಟಾರ್‌ಗಳಿವೆ. ಅದು ಈ ರೀತಿ ಇದೆ.

	ಮಿಲಿಯನ್ ಹೆಕ್ಟಾರ್‌ಗಳಲ್ಲಿ
ಸಾಗುವಳಿ ಭೂಮಿ	21.3
ಕೃಷಿಯೋಗ್ಯವಾದ ಹಾಳು ಭೂಮಿ	15.9
ಹುಲ್ಲುಗಾವಲು ಮತ್ತು ಗೋಮಾಳ ಭೂಮಿ	13.1
ಬಂಜರು ಭೂಮಿ	29.3
ಅರಣ್ಯ ಭೂಮಿ	65.8

ಸೂಕ್ತವಾದ ರೀತಿಯಲ್ಲಿ ಬಳಸಿದರೆ, ನಮ್ಮ ಬಂಜರು ಭೂಮಿ ಪೈರಿನಿಂದನಗುತ್ತದೆ. ನಮ್ಮ ಕಾಡುಗಳು ಯಥೇಚ್ಛ ಆಹಾರ ಮತ್ತು ಕಚ್ಚಾವಸ್ತುಗಳ ಮೂಲವಾಗುತ್ತವೆ. ಸರಿಯಾದ ಕಾಳಜಿ ಇಲ್ಲದೆ ಭಾರತದಲ್ಲಿಂದು ಭೂಮಿ ಆಕಾಶಕ್ಕೆ ಬಾಯಿಬಿಡುತ್ತಿದೆ. ಪ್ರತಿ ವರ್ಷವೂ ಗಾಳಿಮಳೆಗಳಿಂದ ಉಂಟಾಗುವ ಭೂಸವೆತದ ಮೂಲಕ ಸಾವಿರಾರು ಕೋಟಿ ರೂಪಾಯಿಗಳು ವ್ಯಯವಾಗುತ್ತಿವೆ. ಸರಾಸರಿ 15·1. ಭೂಮಿ ಮಾತ್ರ ಒಂದಕ್ಕಿಂತ ಹೆಚ್ಚು ಬಾರಿ ಸಾಗುವಳಿಯಾಗುತ್ತಿದೆ. ಈ ಸಾಗುವಳಿ ಭೂಮಿ ಕೂಡ ಕೊಡಬೇಕಾದ ಇಳುವರಿಗಿಂತ ಅರ್ಧದಷ್ಟು ಕಡಿಮೆ ಇಳುವರಿ ಕೊಡುತ್ತದೆ ಆದರೂ ಈ ಎಲ್ಲ ಬಳಕೆ ಮಾಡದ ಸಂಪತ್ತಿನ ಮಧ್ಯೆ ಅಸಂಖ್ಯ ಜನ ಸಮೂಹವು ಆಹಾರವಿಲ್ಲದೆ, ಉದ್ಯೋಗವಿಲ್ಲದೆ, ಮನೆಯಿಲ್ಲದೆ ಹಾಗೆಯೇ ನರಳುತ್ತಿದೆ. ಇವರಲ್ಲಿ ಬಹುಸಂಖ್ಯಾತರು ಹರಿಜನರೇ ಆಗಿದ್ದಾರೆ.

80 ಮಿಲಿಯನ್ ಎಕರೆ ಭೂಮಿಯಲ್ಲಿ ತಲಾ ನಾಲ್ಕು ಎಕರೆ ಭೂಮಿಯನ್ನು ಭೂಹೀನ ಕುಟುಂಬಳಿಗೆ ಹಂಚುವುದರ ಜೊತೆಗೆ, ಸರ್ಕಾರ ತಾನು ಸಂಗ್ರಹಿಸಿ ಕಾದಿರಿಸಿರುವ 21 ಮಿಲಿಯಟನ್ ಆಹಾರಧಾನ್ಯ 3000 ಕೋಟಿ ರೂ. ಗಳ ವಿದೇಶಿ ವಿನಿಮಯ ಇವುಗಳಿಂದ ಅಸ್ಪೃಶ್ಯರಿಗೆ, ಮೂರು ತಿಂಗಳಿಗೆ ಸಾಲುವ ಆಹಾರ ಧಾನ್ಯ ಮತ್ತು ನೇಗಿಲು ಮುಂತಾದ ಉಪಕರಣಗಳನ್ನು ಕೊಳ್ಳಲು ದ್ರವ್ಯರೂಪದಲ್ಲಿ ಸಾಲ ಕೊಡ[illegible] ಸಾಧ್ಯವಿಲ್ಲವೇನು? ಇಂಥ ಒಂದು ಕಾರ್ಯಕ್ರಮದಿಂದ ಅಲ್ಪ ಕಾಲದಲ್ಲೇ ಎಲ್ಲ ಅಸ್ಪೃಶ್ಯರೂ ತಮ್ಮ ಕಾಲಮೇಲೆ ತಾವು ನಿಲ್ಲುತ್ತಾರೆ. ತರುವಾಯ ಭೂಮಾಲೀಕರು ತಮ್ಮನ್ನು ಹೇಗೆ ನಡೆಸಿಕೊಳ್ಳುತ್ತಾರೆ ಎಂಬ ಬಗ್ಗೆ ಅವರು ಅಷ್ಟು ಕಾಳಜಿ ವಹಿಸುವುದಿಲ್ಲ. ಒಬ್ಬ ಕೈಗಾರಿಕ ಉದ್ಯಮಿಗೆ, ಕೈಗಾರಿಕೆಯೊಂದನ್ನು ಆರಂಭಿಸಲು ಭೂಮಿ, ಕಚ್ಚಾವಸ್ತು, ಮತ್ತು ಹಣವನ್ನು ಒದಗಿಸಲಾಗುತ್ತದೆ. ಅವನು ಉದ್ಯಮದಲ್ಲಿ ತೊಡಗಿಸುವ ಪ್ರತಿಯೊಂದು ರೂಪಾಯಿಗೂ ಸಾರ್ವಜನಿಕರಿಂದ ಹತ್ತು ರೂಗಳನ್ನು ಕೊಡಲಾಗುತ್ತದೆ. ಅಂತಹ ಒಂದು ನೆರವಿಲ್ಲದೆ ಯಾವುದೇ ಕೈಗಾರಿಕೆ ಇಲ್ಲವೆ ಕೈಗಾರಿಕೋದ್ಯಮಿ ಇರಲು ಸಾಧ್ಯವಿಲ್ಲ.' ಅದೇ ರೀತಿ ಅಸ್ಪೃಶ್ಯರಿಗೆ—ಭೂಹೀನರಿಗೆ ಭೂಮಿ, ಆಹಾರ, ಹಣ ಕೊಡುವುದರ ಮೂಲಕ ಅವರು ತಮ್ಮ ಹಾಗೂ ದೇಶದ ಸಂಪತ್ತನ್ನು ಊರ್ಜಿತಗೊಳಿಸುವಂತೆ ಅನುವು ಮಾಡಿಕೊಡಲು ಸಾಧ್ಯವಿಲ್ಲವೇನು? ಅಂಥ ನೀತಿಯೊಂದನ್ನು ಅನುಷ್ಠಾನಕ್ಕೆ ತಂದಿದ್ದೇ ಆದರೆ ಅಸ್ಪೃಶ್ಯತೆ ಹಸಿವು, ಬಡತನ ಯಾವುದೂ ಇರುವುದಿಲ್ಲ. ಜನತಾ ಸರ್ಕಾರಕ್ಕೆ ಭೂ ಮಾಲೀಕರನ್ನು ಮುಟ್ಟುವ ಧೈರ್ಯವಿದೆ ಏನು? ಒಂದು ಪಕ್ಷ ಅದಿಲ್ಲದೆ ಹೋದರೆ, ಅವರು ಕಾಂಗ್ರೆಸ್ಸಿಗಿಂತ ದೊಡ್ಡ ಮೋಸವೆಂದು ಸಾಧಿತವಾಗುತ್ತದೆ.

ಮೂಲ : ಗಿಲ್ಬರ್ಟ್ ಲೊಬೊ
ಅನುವಾದ : ಬಿ. ಕೃಷ್ಣಪ್ಪ

[ಬ್ಲಿಟ್‌ನಿಂದ]

ಅಸ್ಪೃಶ್ಯ ವಿಧ್ಯಾರ್ಥಿ ಹಾಸ್ಟೆಲ್ . . . . .

(2ನೇ ಪುಟದಿಂದ)

ಸೋತು ಗೆದ್ದ ಅಭ್ಯರ್ಥಿಯಾದ ಶ್ರೀ ರಾಜಶೇಖರ್ ರವರನ್ನು ರಿಜಿಸ್ಟ್ರಾರ್ ರವರು "ಈ ರೀತಿ ಆಗಿರುವುದು ಸರಿಯಾ?" ಎಂದು ಪ್ರಶ್ನಿಸಿದಕ್ಕೆ ಶ್ರೀ ರಾಜಶೇಖರ್‌ರವರು "ಅದು ನನ್ನ ತಪ್ಪಲ್ಲ, ವಾರ್ಡನ್‌ರವರನ್ನ ಕೇಳಿ" ಎಂದು ಉತ್ತರವಿತ್ತರೆಂದು ತಿಳಿದುಬಂದಿದೆ. ಶ್ರೀ ರಾಜಶೇಖರರ ನಿಲುವು ಸಮಂಜಸವಾಗಿದೆ.

ಈ ವಿಚಾರ ಡೀನ್, ರಿಜಿಸ್ಟ್ರಾರ್, ವೀಸಿ ಎಲ್ಲರಿಗೂ ತಿಳಿದಿದ್ದರೂ ಅವರುಗಳು ದಲಿತ ವಿದ್ಯಾರ್ಥಿಗಳಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸುವಲ್ಲಿ ವಿನಾಃಕಾರಣ ವಿಳಂಬ ಮಾಡುತ್ತಿದ್ದರು ಈ ದೊರಣೆಯನ್ನು ವಿರೋಧಿಸಿ ನ್ಯಾಯಕ್ಕಾಗಿ ಆಗ್ರಹಿಸಿ ಸುಮಾರು 100 ಜನ ದಲಿತ ವಿದ್ಯಾರ್ಥಿಗಳು ತಾ|| 8–10–77 ರಂದು ವಿಶ್ವವಿದ್ಯಾನಿಲಯದ ಕಾರ್ಯಾಲಯದ ಎದುರು ಧರಣಿಕುಳಿತರು. ಅದೇ ದಿನ ಈ ವಿಷಯವನ್ನು ಚರ್ಚಿಸಲು ಜಿಲ್ಲಾಧಿಕಾರಿಗಳು, ಡೀನ್, ರಿಜಿಸ್ಟ್ರಾರ್, ವಾರ್ಡನ್, ಬಾಟನಿ, ಮತ್ತು ಇಂಡಾಲಜಿ ಪ್ರೊಫೆಸರ್‌ಗಳು — ಇಷ್ಟು ಜನರ ಸಭೆ ಸೇರಿತು. ಇಂದು ನಿರ್ಣಯ ಕೊಡುತ್ತೇವೆಂದು ತಿಳಿಸಿದರು. ಈ ಸಭೆಗೆ ಚುನಾವಣೆಯಲ್ಲಿ 'ಸೋತ' ಚಂದ್ರಶೇಖರ್ ಬಂದಿದ್ದರು ಆದರೆ ಸುಳ್ಳು ಓಟುಗಳನ್ನು ಪಡೆದು ಗೆದ್ದಿದ್ದ ರಾಜಶೇಖರ್ ಬಂದಿರಲಿಲ್ಲ. ಇದೊಂದನ್ನೇ ಕಾರಣವಾಗಿಟ್ಟುಕೊಂಡು ಸೇರಿದ್ದ ಸಭೆ 11ನೇ ತಾರೀಖು ನಿರ್ಣಯ ಕೊಡುತ್ತೇವೆ ಎಂದು ಹೇಳಿತು. ಈ ವಿಳಂಬ ನೀತಿಯನ್ನು ಮತ್ತೆ ದಲಿತ ವಿದ್ಯಾರ್ಥಿಗಳು ಪ್ರತಿಭಟಿಸಿದರು. ಆದರೆ ಜಿಲ್ಲಾಧಿಕಾರಿಯವರು ಆಶ್ವಾಸನೆ ಕೊಟ್ಟ ಮೇಲೆ 11ರ ತನಕ ಕಾಯಲು ಒಪ್ಪಿಕೊಂಡರು.

11ನೇ ತಾರೀಖು ಮತ್ತೆ ಜಿಲ್ಲಾಧಿಕಾರಿ, ಡೀನ್, ರಿಜಿಸ್ಟ್ರಾರ್, ವಾರ್ಡನ್ ಮತ್ತು ಇಬ್ಬರು ಪ್ರೊಫೆಸರ್‌ಗಳು (ಬಾಟನಿ ಮತ್ತು ಇಂಡಾಲಜಿ) ಇವರುಗಳ ಸಭೆ ಸೇರಿತು. "ಚುನಾವಣೆ ಸರಿಯಾದ ನಿಯಮಗಳ ಆಧಾರದ ಮೇಲೆ ನಡೆಯದೆ ಇರುವುದರಿಂದ ಪದಾಧಿಕಾರಿಗಳ ಆಯ್ಕೆಯನ್ನು ರದ್ದುಗೊಳಿಸಿದ್ದೇವೆಂದು" ತೀರ್ಮಾನಿಸಿತು ಆದರೆ ಸರಿಯಾದ ನಿಯಮಗಳು ಆಧಾರದ ಮೇಲೆ ಚುನಾವಣೆ ನಡೆಸದ ವಾರ್ಡನ್‌ರವರ ಮೇಲೆ ಯಾವ ಕ್ರಮ ತೆಗೆದುಕೊಳ್ಳುವ ನಿರ್ಣಯವೂ ಆಗಲಿಲ್ಲ. ನಿಜವಾಗಿ ಗೆದ್ದಿದ್ದ ದಲಿತ ವಿದ್ಯಾರ್ಥಿಗೆ ಆಗಿದ್ದ ಅನ್ಯಾಯ ಹಾಗೆಯೇ ಉಳಿಯಿತು ನ್ಯಾಯಕ್ಕಾಗಿ ಕಾದ ದಲಿತ ವಿದ್ಯಾರ್ಥಿಗಳಿಗೆ ಕೊನೆಗೆ ಸಿಕ್ಕಿದ ನ್ಯಾಯ ಇದು! ಮೈಸೂರು ವಿಶ್ವವಿದ್ಯಾನಿಲಯದ ನ್ಯಾಯ ನಿರ್ಣಯ ವೈಖರಿಗೆ ಇದೊಂದು ಹಿಡಿದ ಕನ್ನಡಿ. ●

ಬೆಲ್ಚಿ ಪ್ರಕರಣ : ಕೆಲವು ಸತ್ಯಗಳು

ಬಿಹಾರ ರಾಜ್ಯದ ಬೆಲ್ಚಿಯಲ್ಲಿ 11 ಜನ ಹರಿಜನರನ್ನು ಗುಂಡಿಕ್ಕಿ ಕೊಲ್ಲಲಾಯಿತು. ಮತ್ತು ಅವರನ್ನು ಉರಿಯುವ ಬೆಂಕಿಗೆ ಎಸೆಯಲಾಯಿತು. ಇದು ಆದದ್ದು 1977ರ ಮೇ 27ರಂದು. ಆದರೆ ಇನ್ನೂಕೂಡ ಬೆಲ್ಚಿಯಲ್ಲಿ ಭೀತಿ ಕವಿದಿದೆ. ಅಲ್ಲಿಯ ಹರಿಜನರು ಕಂಗೆಟ್ಟಿದ್ದಾರೆ. ಈ ರಾಕ್ಷಸ ಕೃತ್ಯ ಆದ ಬಗೆಯಂತೂ ಮುಷ್ಟಿಯನ್ನು ಬಿಗಿ ಮಾಡಿಸುವಂತಹದು. ಮೊದಲು ಹನ್ನೊಂದು ಜನರ ಕೈಗಳನ್ನೂ ಬೆನ್ನಹಿಂದೆ ತಿರುಗಿಸಿ ಭದ್ರವಾಗಿ ಹಗ್ಗ ಕಟ್ಟಿದರು. ಅವರನ್ನು ಜೋಳದ ಹೊಲದ ಹತ್ತಿರ ಬಂದೂಕದ ಪಹರೆಯಲ್ಲಿ ಕರೆತಂದರು. ಅಲ್ಲಿ ಅವರನ್ನು ಸಾಲಾಗಿನಿಲ್ಲಿಸಿ ಒಬ್ಬೊಬ್ಬರ ಮೇಲೂ ಗುಂಡು ಹಾರಿಸಿ ಕೊಂದರು. ಹತ್ತಿರದಲ್ಲೇ ದೊಡ್ಡದಾಗಿ ಬೆಂಕಿ ಉರಿಯುತ್ತಿತ್ತು. ಅದನ್ನು ಮೊದಲೇ ವ್ಯವಸ್ಥೆ ಮಾಡಿದ್ದರು. ಆ ಬೆಂಕಿಗೆ ಹನ್ನೊಂದು ಜನರನ್ನು ಎಸೆದರು. ಅವರನ್ನು ತುಂಡು ತುಂಡು ಮಾಡಿ ಎಸೆದರು. ಇದಕ್ಕೆ ಬಲಿಯಾದ ಪರಶುರಾಮ ಎಂಬ 16 ವರ್ಷದ ಹುಡುಗನೊಬ್ಬ ಬೆಂಕಿಯ ಮಧ್ಯದಿಂದಲೇ ಎದ್ದು ಬರಲು ಯತ್ನಿಸಿದಾಗ ಕೊಲೆಗಡುಕರು ಅವನನ್ನು ಅಲ್ಲೇ ಅಡಗಿಸಿದರು. ಈ ಘೋರ ದೃಶ್ಯವನ್ನು ಗ್ರಾಮಸ್ಥರು ಭೀತಿಯಲ್ಲಿ ದೂರದಿಂದಲೇ ನೋಡುತ್ತಿದ್ದರು.

ಬೆಲ್ಚಿಯಿಂದ ಮೂರು ಕಿಲೋಮೀಟರ್ ದೂರದಲ್ಲಿ ಒಂದು ಪೋಲೀಸ್ ಠಾಣೆ ಇದೆ. ಅಲ್ಲಿಗೆ ಕೆಲವು ಹರಿಜನರು ಓಡಿಹೋಗಿ ಪ್ರಾಣಾಪಾಯದ ಸುದ್ದಿಯನ್ನು ಮಧ್ಯಾಹ್ನ 11 ಗಂಟೆಗೆ ತಿಳಿಸಿದರು. ಆದರೆ ಅಲ್ಲಿನ ಪೋಲೀಸ್ ಅಧಿಕಾರಿ ಹರಿಜನರನ್ನು 500 ರೂ. ಲಂಚ ಕೇಳಿದರು. ಬೆಲ್ಚಿಯಲ್ಲಿ ಹರಿಜನರನ್ನು ಕೊಂದು ಸುಡುವ ಕಾರ್ಯಕ್ರಮ ಮಧ್ಯಾಹ್ನ 12ರಿಂದ ಸಂಜೆ 5ರ ವರೆಗೂ ನಡೆಯಿತು. ಸಂಜೆ ಐದಕ್ಕೆ ಬಳಸುದಾರಿಯಲ್ಲಿ ಎಲ್ಲ ಮುಗಿದ ಮೇಲೆ ಬೆಲ್ಚಿಗೆ ಪೋಲೀಸರು ಬಂದರು. ಅವರಿಗೆ ಬೆಂಕಿಯಲ್ಲಿ ಹರಿಜನರ ತಲೆ ಬುರುಡೆಗಳು ಇನ್ನೂ ಸೀಯದ ಮೂಳೆಗಳು ಸಿಕ್ಕಿದವು. ನರ ಮಾಂಸದ ವಾಸನೆ ಮೂಗಿಗೆ ಬಡಿಯಿತು. ಜಮೀನುದಾರ ಮತ್ತು ಅವನ ಗುಂಡಾಗಳು ಪರಾರಿಯಾಗಿದ್ದರು. ಕೊಲೆಗಡುಕರ ಗುಂಪಿನಲ್ಲಿ ಹೊಸದಾಗಿ ಆಯ್ಕೆಯಾದ ಎಂ.ಎಲ್.ಎ. ಒಬ್ಬ ಬಂದೂಕ ಧಾರಿಯಾಗಿ ಬಂದಿದ್ದನು.

ಬಂದೂಕು ಕೊಟ್ಟವರು ಯಾರು ?

ಈ ಕೊಲೆಗಡುಕ ಜಮೀನುದಾರರಿಗೆ ಬಂದೂಕವನ್ನು ಕೊಟ್ಟವರು ಯಾರು ? ಇವನ್ನು ಅವರು ಬಹಿರಂಗವಾಗಿ ಹೇಗೆ ಬಳಸುತ್ತಿದ್ದರು ? ಆಳುತ್ತಿದ್ದ ಕಾಂಗ್ರೇಸ್ ಪಕ್ಷ ಜಮೀನುದಾರರಿಗೆ ಬಂದೂಕಗಳನ್ನು ಹಂಚಿ ಅವರನ್ನು ಬಲಗೊಳಿಸುವ ಧೋರಣೆಯನ್ನು ಹೊಂದಿತ್ತು. ಒಬ್ಬ ಕಾಂಗ್ರೇಸ್ ಮಂತ್ರಿಯಂತೂ ಭೂ ಮಾಲೀಕರಿಗೆ ಬಹಿರಂಗವಾಗಿ ಬಂದೂಕಗಳನ್ನು ಹಂಚಿದ್ದರು.

ಬೆಲ್ಚಿ ಪ್ರಕರಣದ ಬಗ್ಗೆ ತಪ್ಪು ತಿಳುವಳಿಕೆ

ಕೆಲವು ಕನ್ನಡ ಪತ್ರಿಕೆಗಳು ಬೆಲ್ಚಿ ಪ್ರಕರಣದ ಬಗ್ಗೆ ಪ್ರಚಾರ ಕೊಟ್ಟವು. ಅದನ್ನು ಓದಿದರೆ ಬರುವ ತಿಳುವಳಿಕೆ ಅಪಾಯಕಾರಿಯಾದದ್ದು. ಯಾಕೆಂದರೆ ಬೆಲ್ಚಿ ಪ್ರಕರಣವು ಎರಡು ಕೇಡಿ ಗುಂಪಿನ ನಡುವೆ ನಡೆದ ಜಗಳವೆಂದು ಹರಿಜನರ ಮೇಲೆ ನಡೆದ ದಬ್ಬಾಳಿಕೆ ಅಲ್ಲವೆಂದೂ ಹೇಳುವ ಯತ್ನ ಇಲ್ಲಿ ನಡೆದಿದೆ. ಅನಾವಶ್ಯಕವಾಗಿ ದೇಶದಾದ್ಯಂತ ಇದು ಪ್ರಚಾರವಾಗಬಾರದಿತ್ತೆಂದು ತಿಳಿಸುವ ಪ್ರಯತ್ನವೂ ಇದೆ. ಇಷ್ಟೇ ಅಲ್ಲದೆ ಈ ಪತ್ರಿಕೆಗಳು ಪ್ರಕಟಿಸಿದ ಅಗ್ರಲೇಖನಗಳನ್ನು ಮೆಚ್ಚಿ ಅನೇಕ ವಾಚಕರು ಪತ್ರ ಬರೆದರು. ಪತ್ರಿಕೆ ಮತ್ತು ವಾಚಕರಿಬ್ಬರೂ ಕೂಡ ಬೆಲ್ಚಿ ಘಟನೆ ಹರಿಜನರ ಮೇಲೆ ಸವರ್ಣೀಯರು ಉದ್ದೇಶಪೂರ್ವಕವಾಗಿ ಮಾಡಿದ ಹಲ್ಲೆಯಲ್ಲ. ಎರಡುಕಡೆಯವರು ಪರಸ್ಪರ ಹೊಡೆದಾಡಿದರು. ಎರಡು ಕಡೆಯುಲ್ಲೂ ಕೊಲೆಗಡುಕರಿದ್ದರು. ಎಂದು ಸಮಾಧಾನ ತಂದುಕೊಂಡರು. ಆದರೆ ಇದು ನಿಜದ ಮೇಲೆ ನಡೆದ ಹಲ್ಲೆ. ಆದ್ದರಿಂದ ಘಟನೆಯ ನಿಜ ಸ್ವರೂಪವನ್ನು ತಿಳಿಯುವುದು ಮುಖ್ಯವಾಗಿದೆ.

ಕಾಂಗ್ರೆಸ್ ಮತ್ತು ಜನತಾ ಪ್ರಚಾರಗಳು

ಬೆಲ್ಚಿ ಪ್ರಕರಣಕ್ಕೆ ಕಾರಣ ಜನತಾ ಹಿತಾಶಕ್ತಿಗಳೆಂದೂ ಆದ್ದರಿಂದ ತನಿಖೆ ಆಗಲೆಂದೂ, ಅನೇಕ ಕಾಂಗ್ರೆಸ್ಸಿಗರು ಪ್ರಚಾರ ಮಾಡಿದರು. ಬೆಂಗಳೂರಿನಲ್ಲಿ ಹರಿಜನ ಕಾಂಗ್ರೆಸ್ ಸೆಲ್ಲಿನವರು ಒಂದು ಮೆರವಣಿಗೆಯನ್ನು ರಾಜಭವನಕ್ಕೆ ಕೊಂಡೊಯ್ದು ಅಲ್ಲಿ ಧರಣಿ ಕೂತರು. ಇವರು ಅನೇಕ ಮುಗ್ಧ ಹರಿಜನರಿಗೆ ಬೆಲ್ಚಿ ಪ್ರಕರಣದ ಭಯಾನಕತೆಯನ್ನು ವರ್ಣಿಸಿ ಕಾಂಗ್ರೆಸ್ ಉತ್ತರದಲ್ಲಿ ಸೋತದ್ದೇ ಇದಕ್ಕೆ ಕಾರಣವೆಂದು ಹೇಳಿದರು. ರಾಜಭವನದ ಮುಂದೆ ಧರಣಿ ಕುಂತಿದ್ದ ಹರಿಜನ ಕಾಂಗ್ರೆಸ್ ಪುಡಾರಿಗಳ ಮುಖ್ಯ ಬೇಡಿಕೆ "ಮುರಾರ್ಜಿ ರಾಜೀನಾಮೆ ಕೊಟ್ಟು ಕೆಳಗಿಳಿಯಬೇಕು". ಎಂಬುದಾಗಿತ್ತು. ದೇಶದಾದ್ಯಂತ ಕಾಂಗ್ರೆಸ್ಸಿಗರು ಇದೇ ರೀತಿ ಮಾಡಿ ಬೆಲ್ಚಿಯ ನರಹತ್ಯೆಯನ್ನು ನಾಚಿಕೆಯಿಲ್ಲದೆ ರಾಜಕೀಯ ಬಂಡವಾಳವನ್ನಾಗಿ ಮಾಡಿಕೊಂಡರು. ಆದರೆ ಮೂವತ್ತು ವರ್ಷಗಳ ಆಡಳಿತದಲ್ಲಿ ಸಾವಿರಾರು ಬೆಲ್ಚಿ ಪ್ರಕರಣಗಳನ್ನು ಹುಟ್ಟಿಸಿ ಹಾಡಹಗಲಿನಲ್ಲೇ ಹರಿಜನರನ್ನು ಕೊಲೆಮಾಡಿದ ಕಾಂಗ್ರೆಸ್ ಜಮೀನುದಾರರನ್ನು ಬಡ ಹರಿಜನರು ಹೇಗೆ ಕ್ಷಮಿಸಲು ಸಾಧ್ಯ.

ಜನತಾ ಪಕ್ಷ ಏನೆಂದಿತು !

ಕೇಂದ್ರ ಗೃಹ ಮಂತ್ರಿಗಳು ಮತ್ತು ಬಿಹಾರ ಸರ್ಕಾರ ಬೆಲ್ಚಿ ಘಟನೆ ಎರಡು ಅಪರಾಧಿ ಗುಂಪುಗಳ ನಡುವೆ ಆದ ಘರ್ಷಣೆ ಎಂಬ ತೀರ್ಮಾನಕ್ಕೆ ಬಂದರು. ಆದರೆ ಹರಿಜನ ಸಂಸತ್ ಸದಸ್ಯರ ನಿಯೋಗವೊಂದು ಬೆಲ್ಚಿಗೆ ಭೇಟಿಕೊಟ್ಟು ಪರಿಶೀಲಿಸಿದ ನಂತರ ಇದು ಗುಂಪು ಘರ್ಷಣೆಯಲ್ಲವೆಂದೂ ಹರಿಜನರ ಮೇಲೆ ಸವರ್ಣೀಯರು ನಡೆಸಿದ ದೌರ್ಜನ್ಯವೆಂದೂ ಮುಖ್ಯವಾಗಿ ಇದು ಭೂಹೀನರ ಮತ್ತು ಭೂಮಾಲೀಕರ ನಡುವಿನ ಹೋರಾಟವೆಂದೂ ಹೇಳಿದರು.

ಲೋಹಿಯಾ ಸಿದ್ಧಾಂತ ಮತ್ತು ಕುರ್ಮಿಗಳು

ಬಿಹಾರದಲ್ಲಿ ಕುರ್ಮಿಗಳು ಜಮೀನುದಾರಿ ಜಾತಿಯವರು. ಹರಿಜನರನ್ನು ಕೊಲೆ ಸುಲಿಗೆಗೆ ಒಳಪಡಿಸುತ್ತಿರುವವರು ಇವರೇ. ಕರ್ನಾಟಕ ಮಧ್ಯವರ್ತಿ ಜಾತಿಗಳಿಗೂ ಕುರ್ಮಿ ಜಾತಿಗೂ ಹೋಲಿಕೆಗಳಿವೆ. "ಇಲ್ಲಿ ಕುರ್ಮಿ ಜಾತಿಯೂ 'ಹಿಂದುಳಿದ ವರ್ಗಕ್ಕೆ' ಸೇರುತ್ತದೆ. ಈ ಜಾತಿ ಸಾಮಾಜಿಕ ಪ್ರತಿಷ್ಠೆಯನ್ನು ಏರಿಸಿಕೊಳ್ಳುವುದಕ್ಕಾಗಿ ಬ್ರಾಹ್ಮಣರ ಮೇಲೂ ಸೆಣಸಾಟ ಮಾಡುತ್ತಿದೆ. ಇದರಿಂದ ಲೋಹಿಯಾ ಸಿದ್ಧಾಂತ ಇವರಿಗೆ ಚೆನ್ನಾಗಿ ಅನ್ವಯವಾಗುವುದರಿಂದ ಅನೇಕ ಕುರ್ಮಿಗಳು ರಾತ್ರೋ ರಾತ್ರಿ ಸೋಷಲಿಸ್ಟರಾಗಿ ಪರಿವರ್ತಿತರಾದರು" ಎಂದು ಶಾಂತಿಭೂಷಣ್‌ರವರು ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿಯ 10ನೇ ಜೂನ್ 10ರ ಸಂಚಿಕೆಯಲ್ಲಿ ಹೇಳುವ ಮಾತನ್ನು ಗಮನಿಸಬೇಕು.

ಬೆಲ್ಚಿಯಲ್ಲಿ ಬ್ರಾಹ್ಮಣ ಮತ್ತು ಹರಿಜನ

ಕುರ್ಮಿ ಜಾತಿಗೆ ಸೇರಿದ ಜಮೀನುದಾರ ಮಹಾವೀರ್ ಮೆಹ್ತೊ ಆ ಊರಿನಲ್ಲಿ ಇದ್ದ ಒಂದೇ ಒಂದು ಬ್ರಾಹ್ಮಣ ಕುಟುಂಬದ ಮೇಲೆ ದಾಳಿಮಾಡಿ ಹೆಂಗಸಿಗೆ ಹೊಡೆದುದ್ದರ ಪ್ರಯುಕ್ತ ಬ್ರಾಹ್ಮಣನು ಊರು ಬಿಟ್ಟು ಓಡಿ ಹೋದನು. ಹೋಗುವಾಗ ಜಮೀನುದಾರನನ್ನು ಎದುರು ಹಾಕಿಕೊಂಡಿದ್ದ ಹರಿಜನ ಮುಖಂಡ ಸಿಂಘ್ವನಿಗೆ ತನ್ನ 1.5 ಎಕರೆ ಭೂಮಿಯನ್ನು ಬಿಟ್ಟಿಯಾಗಿ ಕೊಟ್ಟನು. ಹರಿಜನರ ಕಡೆ ಸಹಾಯ ಮಾಡುತ್ತಿದ್ದ ಕುರ್ಮಿ ಜಾತಿಯ ಬಡವರಿಗೂ ಜಮೀನುದಾರನಿಂದ ಒದೆತಗಳು ತಪ್ಪಲಿಲ್ಲ. ನಿಯಮದ ಪ್ರಕಾರ ಕೂಲಿಯಾಳುಗಳಿಗೆ ಮೂರು ಸೇರು ಜೋಳ ಕೊಡಬೇಕಾಗಿತ್ತು. ಆದರೆ ಮಹಾವೀರ ಮೆಹ್ತೊ ಕೊಡುತ್ತಿದುದು ಒಂದು ಸೇರು. ಹೆಚ್ಚಿಗೆ ಕೇಳಿದವರು ಯಾವ ಜಾತಿಯವರೇ ಆಗಲಿ ಒದೆಗೆ ಸಿದ್ಧವಾಗಬೇಕಾಗಿತ್ತು.

ಭೂಹೀನರು, ಭೂಮಾಲೀಕರಿಗೆ ಘರ್ಷಣೆ

ಕೆಲವು ಪತ್ರಿಕೆಗಳು ಮತ್ತು ಕೆಲವು ಜಮೀನುದಾರೀ ಪಕ್ಷಗಳು ಹೇಳುತ್ತಿರುವಂತೆ ಬೆಲ್ಚಿ ಪ್ರಕರಣ ಕೇಡಿಗಳ ಕಾಳಗವಲ್ಲ, ಅದು ಬಡ ಹರಿಜನರು ಸೊಕ್ಕಿನ ಸವರ್ಣೀಯ ಜಮೀನುದಾರರ ಗುಂಡಿಗೆ ಬಲಿಯಾದ ಕಥೆ. ಕೊಲೆಯಾದವರಲ್ಲಿ ಮುಖ್ಯನಾದವರು

(6ನೇ ಪುಟಕ್ಕೆ)

ದಾಖಲೆಗಳು

● ಬೆಂಗಳೂರು : ಬೆಂಗಳೂರು ದಕ್ಷಿಣ ತಾಲ್ಲೂಕು ಕುಂದಲಹಳ್ಳಿಯ ಮೂವರು ಹರಿಜನರು 30-9-77 ರಂದು ರಾತ್ರಿ ಎರಡನೇ ಸಿನಿಮಾ ಪ್ರದರ್ಶನ ನೋಡಿಕೊಂಡು ಹಿಂದಿರುಗುತ್ತಿದ್ದಾಗ ಮಾರತ್ತಹಳ್ಳಿಯ ಕೆಲವು ಸವರ್ಣೀಯರು ಹೊಂಚುಹಾಕಿ ಕಾದಿದ್ದು ಅವರ ಬಾಯಿಗೆ ಬಟ್ಟೆ ತುರುಕಿ ಥಳಿಸಿ ಕೊಲೆ ಪ್ರಯತ್ನ ನಡೆಸಿದ್ದಾರೆ.

ಹರಿಜನರು ಗ್ರಾಮದ ಸುಮಾರು 300 ಎಕರೆಗಳಷ್ಟು ಗೋಮಾಳವನ್ನು ಬಹಳ ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದು ಈಗ ಅದನ್ನು ತಮಗೇ ನೀಡುವಂತೆ ಸರ್ಕಾರಕ್ಕೆ ಅರ್ಜಿ ಸಲ್ಲಿಸಿರುವುದೇ ಈ ಘಟನೆಗೆ ಕಾರಣವಾಗಿದೆ.

ದಲಿತ ಕ್ರಿಯಾ ಸಮಿತಿ
–ಪ್ರಜಾವಾಣಿ 7–10–77

● ಕಲ್ಬುರ್ಗಿ : ಜಲ್ಕಿ ಗ್ರಾಮದಲ್ಲಿ ಊರಿನ ಹತ್ತಿರದಲ್ಲಿರುವ ತಮ್ಮ ಹೊಲದಲ್ಲಿ ಕಟ್ಟಿರುವ ಗುಡಿಸಲಿನಲ್ಲಿ ಹರಿಜನರ ಹಿರಗಪ್ಪ ಮತ್ತಿತರರು ಮಲಗಿದ್ದಾಗ (ಅಕ್ಟೋಬರ್ 1ರಂದು) ಕೆಲವು ಪುಂಡರು ಅವರ ಮೇಲೆ ದಾಳಿ ನಡೆಸಿದಾಗ ಮಲಗಿದ್ದ ಹರಿಜನರಲ್ಲಿ ಹಿರಿಯಪ್ಪ ಸ್ಥಳದಲ್ಲೇ ಮೃತಪಟ್ಟಿದು 6 ಜನರು ತೀವ್ರವಾಗಿ ಗಾಯಗೊಂಡಿದ್ದಾರೆ.

ಕಲ್ಬುರ್ಗಿ : ಇಲ್ಲಿಗೆ ಸಮೀಪದ ಕಟ್ಟಿಮಡ್ಡಿ ಬಳಿ ಹರಿಜನರು ಎರಡು ಗುಡಿಸಲುಗಳಿಗೆ ಕೆಲವು ಸವರ್ಣೀಯ ಗೂಂಡಾಗಳು ಬೆಂಕಿ ಹಚ್ಚಿದ್ದು, ಈ ಘಟನೆಯಿಂದ ಸುಮಾರು 2000 ರೂ. ನಷ್ಟ ಉಂಟಾಗಿದೆ.

–ಪ್ರಜಾವಾಣಿ 9–10–77

● ಪಾಟ್ನ : ಬಿಹಾರ ದರ್ಮಪುರ ಎಂಬ ಹಳ್ಳಿಯಲ್ಲಿ ಭೂಮಾಲೀಕರು ಮೂರು ಜನ ಹರಿಜನರನ್ನು ಅಕ್ಟೋಬರ್ 20 ರಂದು ಗುಂಡಿಕ್ಕಿ ಕೊಂದಿದ್ದಾರೆ.

ಬೋಜ್‌ಪುರ ಜಿಲ್ಲೆಯ ಸೋಥಹಳ್ಳಿಯ ಶಹಪುರ್ ಬ್ಲಾಕಿನಲ್ಲಿ ಭೂ ಮಾಲೀಕ ರಜಪೂತರಿಗೂ ಹರಿಜನರಿಗೂ ಆದ ಘರ್ಷಣೆಯಲ್ಲಿ ರಾಮಪ್ರಸಾದ್ ಚಮ್ಮಾರ್ ಎಂಬ ಹರಿಜನರು ಕೊಲಲ್ಪಟ್ಟಿದ್ದಾರೆ.

ಮತ್ತು ಬೇಗುಸರಾಯ್ ಜಿಲ್ಲೆಯ ಮತಿಹಾನಿ ಹಳ್ಳಿಯಲ್ಲಿ ಒಬ್ಬ ಹರಿಜನರನ್ನು ಜೀವಂತ ಸುಡಲಾಗಿದೆ.

–ಕೈಲಾಶಪತಿ ಮಿಶ್ರ
ಬಿಹಾರದ ಹಣಕಾಸು ಸಚಿವ.
ಇಂಡಿಯನ್ ಎಕ್ಸ್‌ಪ್ರೆಸ್ 24-10-77

● ಬೆಂಗಳೂರು ; ಬನ್ನೇರುಘಟ್ಟ ರಸ್ತೆ ಬಳಿ ಇರುವ ಬಿಳೇಹಳ್ಳಿಯಲ್ಲಿ ಗ್ರಾಮದೇವತೆಯಾದ ವೀರಭದ್ರೇಶ್ವರ ಸ್ವಾಮಿ ದೇವಾಲಯಕ್ಕೆ, 29 ಅಕ್ಟೋಬರ್ 77 ರಂದು ಹರಿಜನರು ಪ್ರವೇಶಿಸಿದ್ದಕ್ಕಾಗಿ ಸವರ್ಣೀಯರು ಅವರ ಮೇಲೆ ಹಲ್ಲೆ ನಡೆಸಿದ್ದಾರೆ.

–ಪ್ರಜಾವಾಣಿ 1–11–77

ಧರ್ಮ, ರಾಷ್ಟ್ರಪ್ರೇಮ ಹೇಳುವವರಿಗೆ ಹೇಳುವುದೇನೆಂದರೆ....

ದೇವನೂರು ಮಹಾದೇವ

ನಾನು, ಧರ್ಮ ರಾಷ್ಟ್ರಪ್ರೇಮ ಪ್ರತಿಪಾದಕರೊಡನೆ ಮಾತಾಡಬೇಕಾಗಿ ಬಂದಾಗ 'ಮಂಗನಿಂದ ಮಾನವ' ಆದ ಎಂಬ ಸರಳ ಸತ್ಯದಿಂದ ನನ್ನ ಮಾತನ್ನು ಆರಂಭಿಸುತ್ತೇನೆ. ಇಂದು ಕಂಡು ಬರುವಂಥ ಜಾತಿ ವರ್ಗ ಮೇಲು ಕೀಳಿನ ಕ್ರೂರತೆ ನೋಡಿದಾಗ ಮನುಷ್ಯರೆಲ್ಲ ಒಂದೇ ಮೂಲದಿಂದ ಹುಟ್ಟಿದವರು ಎಂಬ ಸತ್ಯವನ್ನೇ ನಂಬುವುದಕ್ಕೆ ಕಷ್ಟವಾಗುತ್ತದೆ. ಇತಿಹಾಸದಿಂದಲೂ ಮನುಷ್ಯ ತನ್ನಂತೆ ಇರುವ ಇನ್ನೊಬ್ಬ ಮನುಷ್ಯನ ಬಗ್ಗೆ ಅತ್ಯಂತ ಕ್ರೂರವಾಗಿ ನಡೆದುಕೊಂಡು ಬಂದಿದ್ದಾನೆ. ದಿನನಿತ್ಯ ಕಾಣುವ ದಲಿತರ ನಿರ್ಗತಿಕರ ಬಡವರ ಮೇಲಿನ ಕೊಲೆ ಸುಲಿಗೆ ದಬ್ಬಾಳಿಕೆಗಳನ್ನು ಇಲ್ಲಿ ನಾನು ವಿವರಿಸುವುದಿಲ್ಲ. ಯಾಕೆಂದರೆ ನೀವೂ ಅಂಥದನ್ನು ಕಂಡಿರಬಹುದು, ಮಾಡಿರಬಹುದು ಅಥವಾ ಅನುಭವಿಸಿರಬಹುದು. ನಮ್ಮ ಮುಂದಿರುವ ಸವಾಲೆಂದರೆ– ಮಂಗನಿಂದ ಮಾನವ ಆಗಿದ್ದರೂ ಯಾಕೆ ಮಾನವ ತನ್ನೊಳಗೆ ಹುಲಿಯನ್ನು ಒಚ್ಚಿಟ್ಟುಕೊಂಡಿದ್ದಾನೆ ? ನರಭಕ್ಷಕನಾಗಿರುವ ಮಾನವನನ್ನು ಪುನರ್ ಮಾನವನನ್ನಾಗಿ ಮಾಡುವುದು ಹೇಗೆ? ಇಂಥ ಪ್ರಯತ್ನದಲ್ಲಿ ದಲಿತರದು ಮಾತ್ರವಲ್ಲ, ಇಡೀ ಮಾನವ ಜನಾಂಗದ ಏಳ್ಗೆ ಇದೆ.

ಈಗ ನಾವೆಲ್ಲ ಸ್ವಲ್ಪ ಕಷ್ಟಪಟ್ಟು ಒಂದು [illegible] ಖಂಡದಲ್ಲಿ ಒಂದು ನರಪಿಳ್ಳೆಯೂ ಇರಲಿಲ್ಲ ಅಂದುಕೊಳ್ಳೋಣ. ಆಗ ಹೇಳಿ. ರಾಷ್ಟ್ರ ಅನ್ನುವದಕ್ಕೆ ಏನು ಅರ್ಥ ? ಜನ ಇರುವುದರಿಂದಲೇ ಆ ಪುಣ್ಯದಿಂದಲೇ ಭರತ ಖಂಡ ಒಂದು ರಾಷ್ಟ್ರವಾಗಿದೆ. ಅಂದರೆ ಭರತ ಖಂಡ ಅಂದರೆ, ಭರತ ಖಂಡದಲ್ಲಿ ಉಸಿರಾಡುವ ಜನಗಳು ಎಂದು ಅರ್ಥ. ಹಾಗೇನೆ ರಾಷ್ಟ್ರದ್ರೋಹ ಅಂದರೆ ಇಲ್ಲಿನ ಜನಗಳಿಗೆ ಇಲ್ಲಿನ ಜನಗಳೇ ಮಾಡುವಂಥ ದ್ರೋಹ. ಪುರಾತನ ಕಾಲದಿಂದಲೂ ಇಲ್ಲಿನ ಜನಗಳೇ ಇಲ್ಲಿನ ಜನರಿಗೇ ದ್ರೋಹ ಮಾಡುತ್ತ ಸುಲಿಗೆಮಾಡುತ್ತ ಬಂದಿದ್ದಾರೆ, ರಾಷ್ಟ್ರದ್ರೋಹಿಗಳಾಗಿದ್ದಾರೆ. ಎಣಿಸುತ್ತಾ ಹೋದರೆ ನಮ್ಮ ಜೀವಿತ ಕಾಲವೆಲ್ಲ ಎಣಿಸುವುದರಲ್ಲಿ ಮುಗಿಯುವ ಭಯವಿದೆ.

ಹೀಗೆ ರಾಷ್ಟ್ರದ್ರೋಹಿಗಳು ಮನುಷ್ಯ ಮನುಷ್ಯರ ನಡುವೆ ಜಾತಿ ವರ್ಗ ಸೃಷ್ಟಿಸಿ ಮೇಲು ಕೀಳು ಉಂಟುಮಾಡಿ ತಮ್ಮಂಥ ಮನುಷ್ಯರ ಮಿದುಳು ಮತ್ತು ದುಡಿಮೆಯನ್ನು ತಿಂದು ಬದುಕುತ್ತ ಬಂದಿದ್ದಾರೆ. ಆಸ್ತಿ ಅಂತಸ್ತು ಸಂಪತ್ತು ಪ್ರತಿಷ್ಠೆಗಳನ್ನೆಲ್ಲ ತಮ್ಮಂಥ ಮಾನವರಿಗೆಲ್ಲ ಚಕ್ಕದಂತೆ ಮಾಡಿ ದುಡಿಯುವವರನ್ನೆ ಕಡುಬಡವರಾಗಿಸುವಂಥ ವ್ಯವಸ್ಥೆಯನ್ನು ಹಿಡಿದಿಟ್ಟುಕೊಂಡಿದ್ದಾರೆ. ಧರ್ಮದ ಹೆಸರಲ್ಲು ಭೇದ ಹೆಚ್ಚಾಗುವಂತೆ ಮಾಡಿ ಧರ್ಮವನ್ನು ಹಾದರ ಮಾಡಿದ್ದಾರೆ. ಉದಾಹರಣೆಗೆ ಜಾತಿ ಕಟ್ಟುಪಾಡು ಮಾಡಿ ಜಾತಿಗೊಂದು ನ್ಯಾಯ ಸೃಷ್ಟಿಸಿದ ದಿ. ಮನು ಹಿಂದೂ ಧರ್ಮವನ್ನು ಹಾದರ ಮಾಡಿದ ಪ್ರಥಮ ವಿಟಪುರುಷ. ಇಂಥ ಎಷ್ಟೋ ವಿಟಪುರುಷರು ಇದುವರೆಗೂ [illegible] ಧರ್ಮ ಪುರುಷರೆಂದು ಮೆರೆದಿದ್ದಾರೆ. ಹಾಗೇನೆ ಜನರನ್ನು ಸುಲಿಗೆ ಮಾಡುವ ರಾಷ್ಟ್ರದ್ರೋಹಿಗಳೇ ರಾಷ್ಟ್ರಪ್ರೇಮಿಗಳೆಂದು ಮೆರೆದಿದ್ದಾರೆ. ಇನ್ನು ಕೆಲವರು ಇಂದಿರಾ ಗಾಂಧಿಯವರು ಸಮಾಜವಾದ ಮಾಡುತ್ತಿದ್ದಂತೆ ಬಾಯಲ್ಲಿ ಗ್ರಂಥಗಳಲ್ಲಿ ಸಮಾನತೆಯನ್ನು ಮಾಡಿದ್ದಾರೆ. ಇಂಥ ಅಧಃಪತನದ ಚರಿತ್ರೆಯ ಮೇಲೆ ನಾವು ನಿಂತಿದ್ದೇವೆ.

ಇಂದು ಜಾತಿ ವರ್ಗಗಳಿಂದುಂಟಾದ ಅಸಮಾನತೆಯಿಂದಾಗಿ ಮನುಷ್ಯ ಸಂಕುಚಿತಗೊಂಡಿದ್ದಾನೆ, ಸಾಯುತ್ತಿದ್ದಾನೆ. ರಾಷ್ಟ್ರವಾದಂಥ ಜನತೆಗೆಲ್ಲಾ ಸಮಾನ ಅವಕಾಶ ಸಿಗದೆ ಅವರ ಭಾಗವಹಿಸಿಕೆಇಲ್ಲದೆ ರಾಷ್ಟ್ರದ ಬುದ್ಧಿ ಮತ್ತು ಸಂಪತ್ತು ಕುಗ್ಗುತ್ತಿದೆ. ದುಡಿಮೆ ಅಪವ್ಯಯವಾಗುತ್ತಿದೆ. ದಿನದಿನಕ್ಕೂ ಬಡತನದ ರೇಖೆಯ ಕೆಳಕ್ಕೆ ಅಸಹಾಯಕ ಮನುಷ್ಯ ದಬ್ಬಲ್ಪಡುತ್ತಿದ್ದಾನೆ. ಈಗ ಆಗಬೇಕಾದ್ದು ಸಂಪತ್ತು, ಸಾಧನಗಳನ್ನೆಲ್ಲ ಹಿಡಿದು ಕುಂತಿರುವ ನಿಜವಾದ ರಾಷ್ಟ್ರದ್ರೋಹಿಗಳ ವಿರುದ್ಧ ಸಮರ. ದಲಿತರ ಮುಸ್ಲಿಮರ ನಿರ್ಗತಿಕರ ಹಿಂದುಳಿದವರ ಮುಖಂಡತ್ವದಲ್ಲಿ ಅವರ ಭಾಗವಹಿಸುವಿಕೆಯಲ್ಲಿ ವರ್ಗ ಹೋರಾಟ. ಮನುಷ್ಯ ಮನುಷ್ಯರ ನಡುವೆ ಜಾತಿ ಸುಲಿಗೆಗೆ ಬದಲಾಗಿ ಪ್ರೀತಿಯನ್ನು ಸ್ಥಾಪಿಸಲು, ಅದಕ್ಕಾಗಿ ಎಲ್ಲ ರೀತಿಯ ಅಸಮಾನತೆಯ ವಿರುದ್ಧ ಹೋರಾಟ. ಆಗ ಇಡೀ ಮಾನವ ಜನಾಂಗದ ಪ್ರಗತಿ ತನ್ನ ಮೊದಲ ಅಕ್ಷರವನ್ನು ಬರೆಯುತ್ತದೆ. ಅದಕ್ಕಾಗಿ ನಮ್ಮ ಮಕ್ಕಳಿಗೆ ಪ್ರತಿದಿನವೂ ಇಷ್ಟು ಹೇಳಿಕೊಡೋಣ :

1) ಮಂಗನಿಂದ ಮಾನವ ಆದ.
2) ಮೇಲು ಕೀಳು ಆಚರಿಸುವವರೇ ಅಧರ್ಮಿಗಳು.
3) ಮನುಷ್ಯರೇ ರಾಷ್ಟ್ರವಾದ್ದರಿಂದ ಮನುಷ್ಯರನ್ನು ಸುಲಿಗೆ ಮಾಡುವವರೇ ರಾಷ್ಟ್ರದ್ರೋಹಿಗಳು.
4) ರಾಷ್ಟ್ರದ್ರೋಹಿಗಳಾದ ಸುಲಿಗೆದಾರರ ವಿರುದ್ಧ ಪ್ರತಿಭಟಿಸಬೇಕು.

(ಕರ್ನಾಟಕ ಫ್ರೆಂಡ್ಸ್ ಫೆಡರೇಷನ್ ನಲ್ಲಿ ಆಡಿದ ಮಾತುಗಳು)

....ಅನ್ನ ಸತ್ಯಾಗ್ರಹ

(1ನೇ ಪುಟದಿಂದ)

ಕೇಳಿದರು. ಒಂದು ತಿಂಗಳಲ್ಲ 18 ವರ್ಷ ಕಾದಿದ್ದ ಜನ ಇನ್ನೂ ಕಾಯಲು ತಯಾರಿರಲಿಲ್ಲ. ಮೊದಲಿನ ನಿರ್ಧಾರದಂತೆ ಗಿರಿಯಪ್ಪ, ಬೋರಯ್ಯ, ಲಕ್ಷ್ಮಮ್ಮನವರು ಪುರಸಭೆ ಕಛೇರಿಯ ಮುಂದೆ ಸತ್ಯಾಗ್ರಹ ಕೂತರು.

ಪಟ್ಟು ಹಿಡಿದು ಸತ್ಯಾಗ್ರಹ ಕೂತ ನಂತರ ಪರಿಸ್ಥಿತಿ ಅರಿತ ಪುರಸಭೆ ಅಧಿಕಾರಿಗಳಿಂದ ಜಿಲ್ಲಾಧಿಕಾರಿ ಮತ್ತು ವಿಶೇಷ ಜಿಲ್ಲಾಧಿಕಾರಿಗಳಿಗು ಸುದ್ದಿ ಮುಟ್ಟಿತಲ್ಲದೆ ರಾತ್ರಿ 11 ಗಂಟೆಗೆ ಅವರು ಬಂದು ಆಗಿರುವ ಅನ್ಯಾಯ ಸರಿಪಡಿಸಿ ಸೈಟು ಹಂಚಿಕೊಡುವ ಭರವಸೆ ಕೊಟ್ಟು ಸತ್ಯಾಗ್ರಹವನ್ನು ನಿಲ್ಲಿಸುವಂತೆ ಮನವಿ ಮಾಡಿಕೊಂಡದ್ದರಿಂದ ತಾತ್ಕಾಲಿಕವಾಗಿ ಸತ್ಯಾಗ್ರಹ ನಿಲ್ಲಿಸಿದ್ದಾರೆ.

ತಾತ್ಕಾಲಿಕವಾಗಿ ಸತ್ಯಾಗ್ರಹ ರದ್ದು ಗೊಳಿಸಿದ್ದೇವೆ ಎಂದು 'ದಲಿತ ಸಂಘರ್ಷ ಸಮಿತಿ' ಕರಪತ್ರ ಹೊರಡಿಸಿದ್ದು ಇದರ ಅರ್ಥ ಇವರುಗಳೂ ಮಾತಿಗೆ ತಪ್ಪಿದರೆ ಮತ್ತು ಹೋರಾಟ ಮುಂದುವರಿಯುತ್ತದೆ ಎನ್ನುವುವೇ ಆಗಿದೆ. ●

ಬೆಲ್ಚಿ ಪ್ರಕರಣ . . . .

(5ನೇ ಪುಟದಿಂದ)

ಹರಿಜನರ ಮುಖಂಡ ಸಿಂಘ್ವ. ಈತ ಒಬ್ಬ ಕೃಷಿ ಕೂಲಿಕಾರ. ಹೆಚ್ಚು ಕೂಲಿ ಸಿಕ್ಕುವುದೆಂಬ ಆಶೆಯಿಂದ ಈ ಊರಿಗೆ ಬಂದವನು. ಜಮೀನುದಾರರ ದಬ್ಬಾಳಿಕೆಯ ವಿರುದ್ಧ ಹರಿಜನರನ್ನು ತನಗೆ ತಿಳಿದಂತೆ ಸಂಘಟಿಸಿದನು. ಇದಕ್ಕೆ ಶೋಷಣೆಯ ಸಂಕಟ ತಾಳಲಾರದ ಜಮೀನುದಾರನ ಜಾತಿಯವರೂ ಬೆಂಬಲ ನೀಡುತ್ತಿದ್ದರು. ವರ್ಷಕ್ಕೆ 250 ರೂ. ಕೊಡುವ ಕರಾರಿನ ಮೇಲೆ ಕಾಮ್ತಾ ಮಹ್ತೋ ಎಂಬ ಜಮೀನುದಾರನ ಹೊಲವನ್ನು ಪಾಲಿಗೆ ಮಾಡುತ್ತಿದ್ದನು. ಇವನ ಜೊತೆಯಲ್ಲಿ ಬಂದೂಕ ಮತ್ತು ಬೆಂಕಿಗೆ ಆಹುತಿಯಾದವರಲೆಲ್ಲ ಭೂಹೀನ ಹರಿಜನರು.

ಬೆದರುವ ಬೆಲ್ಚಿ : ಮತ್ತೆ ದಾಳಿ !

ಹಣದ ಬಲದಿಂದ ಏನು ಬೇಕಾದರೂ ಸಾಧಿಸಬಹುದೆಂದು ತಿಳಿದಿರುವ ಜಮೀನುದಾರರು ಬಂಧನ, ವಾರಂಟುಗಳಿಗೆ ಜಗ್ಗುವವರಲ್ಲ 'ಹೊರಗೆ ಬಂದು ತೋರಿಸುತ್ತೇನೆ' ಎಂದು ಕೊಲೆಗಡುಕರ ನಾಯಕ. ಜೈಲಿನಿಂದಲೇ ಹೇಳಿ ಕಳುಹಿಸುತ್ತಿದ್ದಾನೆ. ತಲೆ ತಪ್ಪಿಸಿಕೊಂಡಿರುವ ಇನ್ನೊಬ್ಬ ಕೊಲೆಗಡುಕ ಪರಶುರಾಂ ಧನುಕ್ ಆಗಸ್ಟ 1ನೇ ತಾರೀಖು ಬೆಲ್ಚಿಯ ಮೇಲೆ ಮತ್ತೊಮ್ಮೆ ದಾಳಿ ಮಾಡಿದನು. ಮೇ 27ರ ನಂತರ ಮತ್ತೊಮ್ಮೆ ಬೆಲ್ಚಿಗೆ ಭೀತಿ ಆವರಿಸಿತು.

ಹರಿಜನರ ನಿಲ್ಲದ ಆರ್ತನಾದ

ಈ ಪ್ರಕರಣದಲ್ಲಿ ಬಂಧಿತರಾದ 4 ಜನರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಅವರು ಪುನಃ ಹಳ್ಳಿಯಲ್ಲಿ ಕಾಣಿಸಿಕೊಂಡು ಅವರ ಹೊಲದಲ್ಲಿ ಕೆಲಸ ಮಾಡಲು ಒಪ್ಪದ ಹರಿಜನರಿಗೆ ಬೆದರಿಕೆ ಹಾಕುತ್ತಿದ್ದಾರೆ. ಈ ಘಟನೆ ನಡೆದು 2 ತಿಂಗಳಾದರೂ ಹರಿಜನರ ಆರ್ತನಾದ ನಿಂತಿಲ್ಲ. ತೇಪೆಸೀರೆ ಉಟ್ಟಿದ್ದ ದಲಿತ ಹೆಂಗಸೊಬ್ಬಳು ಬರಿಮೈಯ್ಯ ಮಗುವೊಂದನ್ನು ಕಂಕುಳಲ್ಲಿ ಸಿಗಿಸಿಕೊಂಡಿದ್ದಳು. ಅವಳನ್ನು ಈ ಬಗ್ಗೆ ಕೇಳಿದಾಗ "ಹೊಲೆ ಮಾದಿಗರು ನೆಮ್ಮದಿಯಿಂದ ಬಾಳುವ ಜಾಗ ಈ ಭೂಮಿ ಮ್ಯಾಲೆ ಎಲ್ಲೂ ಇಲ್ಲವೇ" ಎಂದು ಗೋಳಾಡಿದಳು.

ದಲಿತರ ಬಗ್ಗೆ ಪ್ರಾಮಾಣಿಕ ಕಾಳಜಿಯಿದ್ದು ಅವರನ್ನು ಸಂಘಟಿಸಿ ಶೋಷಣೆಯ ವಿರುದ್ಧ ಸಮರ ಮಾಡಬೇಕು ಎನ್ನುವವರಿಗೆಲ್ಲ ಬೆಲ್ಚಿ ಘಟನೆ ಮುಖ್ಯವಾದ ಪಾಠವಾಗಿದೆ.

- ಸಿದ್ಧಲಿಂಗಯ್ಯ

ತಿಮ್ಮಕ್ಕನ ಕಣ್ಣೀರಿನ ಕಥೆ

(3ನೇ ಪುಟದಿಂದ)

ಗಳಿಗೆ ಇದುವರೆಗೆ ಬಹಳಷ್ಟು ಸಾರಿ ದೂರು ಕೊಟ್ಟಿದ್ದಾರೆ. ಪೋಲೀಸ್ ಅಧಿಕಾರಿಗಳ ಮುಂದೆ ಯಾಚಿಸಿದ್ದರೂ. ಯಾವಕ್ರಮವನ್ನು ತೆಗೆದುಕೊಂಡಿಲ್ಲ. ಇದರಿಂದಾಗಿ ತಿಮ್ಮಕ್ಕನಂತೆ ಬಹಳಷ್ಟು ಜನರು ಆರ್ಮುಗಂನಜಾಲಕ್ಕೆ ಸಿಕ್ಕಿ ಅನಾಥರಾಗುವ, ದೌರ್ಜನ್ಯಕ್ಕೆ ಸಿಜ್ಜಿಜಜ್ಜಿ ಹೋಗುವ ಸಾಧ್ಯತೆಗಳು ಇದ್ದೇ ಇವೆ. ●

ಸಂಪಾದಕ ಮತ್ತು ಪ್ರಕಾಶಕ : ರಾಮದೇವ ರಾಕೆ, ವಿಳಾಸ : ದಲಿತ ಸಂಘರ್ಷ ಸಮಿತಿ, ಭದ್ರಾವತಿ. ಮುದ್ರಣ : ಶ್ರೀ ಮಂಜುನಾಥ ಪ್ರಿಂಟರ್ಸ್, ಭದ್ರಾವತಿ.